ಅಂಗಿಬಟ್ಟೆ

ನಾಟಕ



ಬಿ.ಪಿ.ನಾಗರಾಜ

ಅಂಗಿ ಬಟ್ಟೆ ನಾಟಕದ ಬಗ್ಗೆ ಅಭಿಪ್ರಾಯಗಳು

ನಿಗಿ ನಿಗಿ ಕೆಂಡವನ್ನು ಬದುಕಿನ ಬೆಂಕಿಯಿಂದೆತ್ತಿ ರಂಗದ ಮೇಲಿಟ್ಟಿದ್ದೀರಿ. ಹರಕು ಅಂಗಿ ಬಟ್ಟೆ ಉರಿಯುತ್ತಿದೆ. ಭೇಷ್! **-ನಿರಂಜನ**

ಓದಿ ನೋಡಿ ಮೆಚ್ಚಿಕೊಂಡಿದ್ದೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಇದನ್ನು ಪ್ರಯೋಗಿಸಿದರೆ, ಜನರು ನೋಡಿ ನಲಿಯುವುದೂ ಮತ್ತು ಪ್ರಚೋದಿತರಾಗುವುದೂ ಖಂಡಿತ. **-ಬಸವರಾಜ ಕಟ್ಟೀಮನಿ**

ಲೇಖಕರು ಹೇಳಬೇಕೆಂದಿರುವ ಮಾತನ್ನು ಪಟ್ಟು ಹಿಡಿದು ಸಾಧಿಸಬೇಕೆನ್ನುವ ಹಠದಿಂದ ಪಾತ್ರಗಳನ್ನು ಮತ್ತು ಪ್ರಸಂಗಗಳನ್ನು ತರುವಂತೆ ಕಂಡರೂ, ರಂಗದ ಮೇಲೆ ಪ್ರಭಾವ ಬೀರುವಲ್ಲಿ 'ಅಂಗಿ ಬಟ್ಟೆ' ಯಶಸ್ವಿಯಾಗುತ್ತದೆ. **-ಸಿದ್ಧಲಿಂಗ ಪಟ್ಟಣಶೆಟ್ಟಿ**

('ಅಂಗಿ ಬಟ್ಟೆ' ನಾಟಕವನ್ನು ಆಧರಿಸಿ ಶಿವಮೊಗ್ಗದ ಸಿನಿ ಕ್ರಿಯೇಶನ್ಸ್ ತಂಡದವರು 'ಸತ್ಯ ಸಂಘರ್ಷ' ಎಂಬ ಚಲನಚಿತ್ರವನ್ನು ಕ್ರಿ.ಶ.1996ರಲ್ಲಿ ನಿರ್ಮಾಣ ಮಾಡಿದ್ದಾರೆ. ಈ ಚಲನಚಿತ್ರದ ನಿರ್ದೇಶಕರು ಮಂಡ್ಯದ ಬ.ಮಾ. ಶಿವರಾಜು ಅವರು.)

ಅಂಗಿ ಬಟ್ಟೆ

(ರಚನೆ : 1983)

ಸಿ.ಪಿ.ನಾಗರಾಜ

ನಾಗು ಸ್ಮಾರಕ ಪ್ರಕಾಶನ

75, 'ಎ' ಬ್ಲಾಕ್, 5 ನೆಯ ಕ್ರಾಸ್, ಕ್ರಿಶ್ಣ ಗಾರ್ಡನ್,

ಆರ್.ವಿ.ಕಾಲೇಜು ಪೋಸ್ಟ್, ಬೆಂಗಳೂರು-560059. ಮೊ.9986347521.

ngy7777@gmail.com

ಪಾತ್ರವರ್ಗ

ಬೋರೇಗೌಡ---ಊರಿನ ಗೌಡ

ದೊಡ್ಡೈದ----ಬೋರೇಗೌಡನ ಜತೆಯಲ್ಲಿರುವವನು

ವಿಶ್ವನಾಥ---ಕಾಲೇಜು ಅಧ್ಯಾಪಕ

ಇಂಜಿನಿಯರ್

ಇಂಜಿನಿಯರ್ ಮಗ

ತಹಶೀಲ್ದಾರ್

ಎಂ.ಎಲ್.ಎ.,

ಕೊತ್ತಿಬುಡ್ಡ

ಕೊತ್ತಿಬುಡ್ಡನ ಸಂಗಡಿಗರು---ಎಂಟು ಮಂದಿ

ರಮೇಶ---ಸಿ.ಟಿ.ಓ

ವಿದ್ಯಾರ್ಥಿ---ರಮೇಶನ ಮಗ

ಡಾಕ್ಟರ್---ಸರ್ಕಾರಿ ಆಸ್ಪತ್ರೆಯ ವೈದ್ಯ

ಓಣಿ ನಿಂಗ---ಕೂಲಿಯವನು

ಓಣಿ ನಿಂಗನ ಎಂಟು ವರ್ಷದ ಮಗ

ವ್ಯಕ್ತಿ---ಸರ್ಕಾರಿ ಆಸ್ಪತ್ರೆಯಲ್ಲಿ ಶುಶ್ರೂಷೆ ಪಡೆಯುತ್ತಿರುವ ವ್ಯಕ್ತಿ

ಕೂಲಿಯವನು---ಅಂಗಿ ಬಟ್ಟೆ ಹರಿಸಿಕೊಂಡವನು

ಬಡರ---ಕೂಲಿಯವನು

ಕರಿಯಪ್ಪ---ಬೋರೇಗೌಡನ ಊರಿನವನು

ಅಂಗಿ ಬಟ್ಟೆ

(ಬೀದಿಯ ದೃಶ್ಯ. ಸಂಜೆ ಆರು ಗಂಟೆಯ ಸಮಯ. ಮುಚ್ಚಿದ್ದ ಅಂಗಡಿಗಳ ಸಾಲಿನ ಮುಂದೆ ನಾಲ್ಕಾರು ಮಂದಿ ಕೂಲಿಗಳು ಮಲಗಿದ್ದಾರೆ. ಒಂದಿಬ್ಬರು ಗೋಡೆಗೆ ಒರಗಿ ಕುಳಿತಿದ್ದಾರೆ. ಅಲ್ಲಿಗೆ ಬೋರೇಗೌಡ ಮತ್ತು ದೊಡ್ಡೈದ ಪರಸ್ಪರ ಮಾತನಾಡುತ್ತಾ, ರಂಗದ ಎಡಬದಿಯಿಂದ ಬರುತ್ತಾರೆ.)

ಬೋರೇಗೌಡ : ಲೋ ದೊಡ್ಡೈದ, ಹೆಂಗ್ಲಾ ಆರಂಭ ಮಾಡೋದು? ಮಳೆ ಹೋಗಿ ಗಟ್ಟ ಸೇರ್‍ಕೊಂತು. ಗೊಬ್ರದ ರೇಟ್ ನೋಡುದ್ರೆ ಏಕ್‌ದಂ ಹೆಚ್ಚಾಗೊಯ್ತು!

ದೊಡ್ಡೈದ : ನೀವು ಹೇಳೋ ಮಾತು ನಿಜ ಕಣ ಹೇಳಿ.

ಬೋರೇಗೌಡ : ಏನ್ಲಾ ಯಾವ ಸಾಲ ತಂದು ಏಳುದ್ರು, ಈ ನನ್ಮಗನ ವ್ಯವಸಾಯ ಮಾಡಿ ಬದುಕವಂಗಿಲ್ಲ ಕಲೆ!

ದೊಡ್ಡೈದ : ಹೂ ಕಣ ಹೇಳಿ. ಮೊದ್ಲೆ ನಮ್ಮ ಹಿರೀಕರು ಹೇಳಿಲ್ವೆ "ವ್ಯವಸಾಯ.... ನೀ ಸಾಯ.... ನಿನ್ನ ಹೆಂಡರು ಸಾಯ.... ನಿನ್ನ ಮಕ್ಳು ಸಾಯ.... ನಿನ್ನಟ್ಟಿ ದನಕರ ಎಲ್ಲಾ ಸಾಯ" ಅಂತ.

(ಅಷ್ಟರಲ್ಲಿ ಬೋರೇಗೌಡ ಅಂಗಡಿಗಳ ಮುಂದೆ ಒರಗಿದ್ದ ಒಬ್ಬ ಕೂಲಿಯವನನ್ನು ನೋಡುತ್ತಾನೆ.ನೋಡಿದ ಕೂಡಲೇ, ಏನೋ ತಟ್ಟನೆ ನೆನಪಿಗೆ ಬಂದು, ಮತ್ತೆ ದೃಷ್ಟಿಸಿ ನೋಡುತ್ತಾನೆ. ಆ ಕೂಲಿಯವನನ್ನು ತಕ್ಷಣ ಗುರುತು ಹಿಡಿದು, ಅತಿ ಕೋಪದಿಂದ ಅವನತ್ತ ನುಗ್ಗಿ "ಲೇ, ಕಳ್ಳ ಬಡ್ಡಿಮಗ್ನೆ.... ಇಲ್ಲಿದ್ದೀಯಾ...." ಎನ್ನುತ್ತಾ ಕೂಲಿಯನ ಹೆಕ್ಕತ್ತಿಗೆ ಕೈಯಿಕ್ಕಿ ಬಿಗಿಯಾಗಿ ಹಿಡಿದು ರಂಗದ ಮುಂದಕ್ಕೆ ಅವನನ್ನು ಎಳೆದು ತರುತ್ತಾನೆ. ಕೂಲಿಯವನು ಬಿಡಿಸಿಕೊಳ್ಳಲು ಪ್ರಯತ್ನಿಸಿದಷ್ಟು ಬೋರೇಗೌಡನ ಹಿಡಿತ ಹೆಚ್ಚಾಗುತ್ತದೆ. ಕ್ಷಣ ಮಾತ್ರದಲ್ಲಿ ನಡೆದ ಈ ಘಟನೆಯಿಂದ ದೊಡ್ಡೈದ ಗಾಬರಿಗೊಂಡು....)

ದೊಡ್ಡೈದ : ಇದ್ಯಾಕಣ್ಣ!.... ಇದ್ಯಾಕಣ್ಣಾ ?

ಬೋರೇಗೌಡ : (ಅತಿ ಕೋಪದಿಂದ ಕೆರಳಿದವನಾಗಿ)
ಈ ಕಳ್ಳಲೌಡಿಮಗ ಎಂಥಾ ಕೈಕೊಟ್ಟವ್ನೆ ಗೊತ್ತೆ ನಿಂಗೆ?
(ಎನ್ನುತ್ತಾ ಕೂಲಿಯವನ ಮುಖದ ಮೇಲೆ ಒಂದೇ ಸಮನೆ ಹೊಡೆಯುತ್ತಾನೆ.)

ದೊಡ್ಡೈದ : ಬುಡಣ್ಣೋ ಬುಡಣ್ಣೋ.

(ಎಂದು ಬೋರೇಗೌಡನನ್ನು ತಡೆಯಲು ಪ್ರಯತ್ನಿಸಿ ವಿಫಲನಾಗುತ್ತಾನೆ. ಅಷ್ಟರಲ್ಲಿ ಏಟುಗಳು ಮತ್ತಷ್ಟು ಜಾಸ್ತಿಯಾಗುತ್ತವೆ. ಅಲ್ಲಿದ್ದ ಕೂಲಿಗಳಲ್ಲಿ ಅನೇಕರು ಎದ್ದು ಬರುತ್ತಾರೆ. ಅವರಲ್ಲಿ ಕೆಲವರು ದೂರ ನಿಂತುಕೊಂಡೇ "ಬುದ್ರಪ್ಪೋ.... ಬುದ್ರಪ್ಪೋ.... ಹೊಡಿಬ್ಯಾಡಿ ಬುದ್ರಪ್ಪೋ" ಎಂದು ಬೇಡಿಕೊಳ್ಳುತ್ತಾರೆ. ದೊಡ್ಡೈದ ಅಡ್ಡಲಾಗಿ ಬಂದು, ತಾನು ಒಂದೆರಡು ಏಟನ್ನು ತಿನ್ನುತ್ತಾ, ಬೋರೇಗೌಡನ ಬಿಗಿ ಮುಷ್ಟಿಯಿಂದ ಆ ಕೂಲಿಯವನನ್ನು ಕಷ್ಟಪಟ್ಟು ಬಿಡಿಸಿ ದೂರ ತಳ್ಳುತ್ತಾನೆ.)

ಬೋರೇಗೌಡ : (ಕೂಲಿಯವನನ್ನೇ ಕೆಕ್ಕರಿಸಿ ನೋಡುತ್ತಾ)

ಲೇ ದೊಡ್ಡೈದ, ಸುಮ್ನೆ ನಿಂತ್ಕೊಳ್ಳ ನೀನು. ನಿಂಗೇನು ಗೊತ್ತಾ...ಈ ಬಡ್ಡಿಹೈದ್ನ ಕಳ್ಳಾಟ?

ದೊಡ್ಡೈದ : ಏನ್ ಮಾಡಿದ್ದನಣ್ಣ?

ಬೋರೇಗೌಡ : ಏನ್ ಮಾಡಿದ್ದನು?.... ತಿಂದನಲ್ಲ ಒದೆಯ.... ಅವನ್ನೆ ಕೇಳು ಹೇಳ್ತನೆ.

ದೊಡ್ಡೈದ : (ಕೂಲಿಯವನ ಕಡೆಗೆ ನೋಡುತ್ತಾನೆ. ಕೂಲಿಯವನ ಮುಖದಲ್ಲಿ ಸಂಕಟವು ಹೆಪ್ಪುಗಟ್ಟಿರುತ್ತದೆ.)

ಏನೋ?.... ಏನು ಮಾಡ್ದೋ?.... ನಮ್ಮ ಗೌಡಂಗೆ?

(ಕೂಲಿಯವನು ಮಾತಿಲ್ಲದೆ ಭೀತಿಭಾವದಿಂದ ಗೌಡನನ್ನೇ ನೋಡುತ್ತಿರುತ್ತಾನೆ.)

ಬೋರೇಗೌಡ : ಏನೋ.... ನನ್ನ ಮೊಕನೇ ದುರುಗುಟ್ಟುಕೊಂಡು ನೋಡ್ತಾ ಇದ್ದೀಯೇ?
(ಎನ್ನುತ್ತಾ ಮುನ್ನುಗ್ಗಿ ಮತ್ತೊಮ್ಮೆ ಮುಖದ ಮೇಲೆ ಹೊಡೆಯುತ್ತಾನೆ. ದೊಡ್ಡೈದ ಮತ್ತೆ ಬಿಡಿಸುತ್ತಾನೆ.)

ಬೊಗುಳ್ಳ.... ಗೌಡ್ನ ಹೇಲ ತಿಂದ್ಬುಟ್ಟು.... ತಲೆ ಮರಿಸ್ಕೊಂಡು ತಿರುಗ್ತಾವ್ನಿ ಅಂತ.

ದೊಡ್ಡೈದ : ಅಣ್ಣೋ.... ಒಸಿ ಸಮಾಧಾನ ಮಾಡ್ಕೊಳಣ್ಣ.
(ಕೂಲಿಯವನ ಕಡೆಗೆ ಕೈ ತೋರಿಸುತ್ತಾ)
ಆ ಬಡ್ಡತ್ತದ್ದ ನೋಡುದ್ರೆ ಗುಪ್ಪಟ್ಟೆ ರೋಗ್ದೋನಂಗೆ ಕಾಣ್ತನೆ... ಮಾತಾಡುಕೆ ಉಸಿರಿದ್ದದೋ?.... ಇಲ್ವೋ? ಅದೇನ್ ನೀನೇ ಹೇಳ್ಬುಡಣ್ಣ.

ಬೋರೇಗೌಡ : ಯಾರಿಗ್ಲಾ ಗುಪ್ಪಟ್ಟೆ ರೋಗ? ನಿಂಗೆ ನಂಗೆ ಕಲ ರೋಗ. ಮನೇ ಮನೇಲಿ ಮುದ್ದೆ ನುಂಗಿ, ಮಾರಿಗುಡೀಲಿ ನಿದ್ದೆ ಮಾಡೋ.... ಈ ನನ್ಮಕ್ಳಗೆ ಎಂಥದ್ಲಾ ರೋಗ?.... ಕಂಡೋರ್ ಗಂಟ ಸಲೀಸಾಗಿ ನುಂಗಿ ನುಂಗಿ.... ಹೆಂಗೆ ಮೈ ಬೆಳಿಸ್ಕೊಂಡವ್ನೆ ನೋಡು ಕಳ್ಳಸೂಳೆ ಮಗ.

ಬಡರ : ಅದೇನ್ ಮಾಡ್ದ ಅಂತ ನೀವೆ ಹೇಳ್ಬುಡಿ ಗೌಡ್ರೆ.

ಬೋರೇಗೌಡ : ಯಾವೋನ್ಲಾ ಅವನು ಹೇಳ್ಬುಡಿ ಅನ್ನೋನು?.... ಕೇಳ್ಬುಟ್ಟು ನೀನೇನು ಬಗೆಹರಿಸ್ಬುಟ್ಟಿಯಾ?

ಬಡರ : ನಮ್ಮ ಕೈಲಿ ಏನಾದದ್ರಪ್ಪೋ ಬಗೆಹರಿಸೋಕೆ. ಅಲ್ಲಿ ಗೇದು ಅಲ್ಲಿ ತಿನ್ನು ಬಡ್ಡತ್ತವು ನಾವು.

ಬೋರೇಗೌಡ : ಮತ್ತಿನ್ಯಾಕೆ ತಲೆ ಹಾಕ್ಕೊಂಡು ಬಂದಿದ್ದಿಯೇ?

ಬಡರ : ನೀವು ಅದೇನೋ ಕೂಗಾಡ್ತಿದ್ದರಲ್ಲಾ.... ಅದ್ಕೆ ಸುಮ್ನೆ ಬಂದೊ. ನಮಗ್ಯಾಕ್ರಪ್ಪ ನಿಮ್ಮಂಥ ದೊಡ್ಡೋರ ಇಚಾರ.

ಬೋರೇಗೌಡ : ಮತ್ತೆ ತಿಕ ಮುಚ್ಕೊಂಡು ನಿಂತ್ಕೊಳುದ ಕಲೀಲ. ನನ್ನ ಹೊಟ್ಟೆ ಉರಿ ನಿಂಗೇನ್ ಗೊತ್ತು?
(ಈ ರೀತಿ ಮಾತುಕತೆ ನಡೆಯುತ್ತಿರುವಾಗ, ಆ ಊರಿನ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದ ವಿಶ್ವನಾಥ ರಂಗದ ಬಲಬದಿಯಿಂದ ಬರುತ್ತಾನೆ. ದಾರಿಯಲ್ಲಿ ಜಮಾಯಿಸಿದ್ದ ಗುಂಪನ್ನು ಕಂಡು ಅಚ್ಚರಿ ಹಾಗೂ ಗಾಬರಿಯಿಂದ ನೋಡುತ್ತಾ ಮುಂದೆ ಸಾಗುತ್ತಿದ್ದಂತೆಯೇ, ಆ ಗುಂಪಿನಲ್ಲಿದ್ದ ಬೋರೇಗೌಡರನ್ನು ಕಂಡು)

ವಿಶ್ವನಾಥ : ನಮಸ್ಕಾರ ಗೌಡ್ರೆ. ಇದೇನು ಇಲ್ಲಿ ನಿಂತ್ಕೊಂಡಿದ್ದೀರಿ?

ಬೋರೇಗೌಡ : ನಮಸ್ಕಾರ.... ಬನ್ನಿ ಸ್ವಾಮಿ, ಹಿಂಗೆ ನಿಂತ್ಕೊಂಡೆ ಕಣಾ. ರೈತರಾಗಿ ಹುಟ್ಟಿದ ಮೇಲೆ ಇದ್ದೇ ಇರ್ತದಲ್ಲ.... ಏನಾದ್ರು ತಂಟೆ ತಕರಾರು.

ವಿಶ್ವನಾಥ : ಯಾಕೋ ತುಂಬಾ ಬೇಸರದಲ್ಲಿರುವಂಗೆ ಕಾಣುತ್ತೆ... ಏನು ವಿಷಯ?

ಬೋರೇಗೌಡ : (ಕೂಲಿಯವನ ಕಡೆ ಕೈ ತೋರಿಸುತ್ತಾ)

ನೋಡಿ, ಆ ಕಳ್ಳಬಡ್ಡಿಮಗ ಅವ್ನಲ್ಲ....

(ಎಂದು ಹೇಳುತ್ತಿದ್ದಂತೆಯೇ ತೀವ್ರ ಕೋಪದಿಂದ ಉದ್ರೇಕಗೊಂಡು ಅವನನ್ನು ಹೊಡೆಯಲು ನುಗ್ಗುತ್ತಾನೆ. ಇದನ್ನು ಮೊದಲೇ ಊಹಿಸಿದ್ದ ದೊಡ್ಡೈದ ಅಡ್ಡಬಂದು ತಡೆಯುತ್ತಾನೆ.)

ಮೆಳ್ಳಗಣ್ ಸೂಳೆಮಗ ನೋಡ್ತಿರೋದ ನೋಡಿ.

ವಿಶ್ವನಾಥ : ನೀವು ತಿಳ್ದೋರೆ ಹೀಗೆ ಕೋಪ ಮಾಡ್ಕೊಂಡ್ರೆ ಹೇಗೆ? ಸ್ವಲ್ಪ ಸಮಾಧಾನ ಮಾಡ್ಕೊಳಿ.

ಬೋರೇಗೌಡ : ಕಷ್ಟಪಟ್ಟು ಸಂಪಾದ್ನೆ ಮಾಡೀರು ದುಡ್ಡ.... ಈ ನನ್ಮಕ್ಳು ಬಾಯ್ಗೆ ಇಕ್ಕಿ ನೀರು ಬುಟ್ಟು.... ಹೆಂಗೆ ಸ್ವಾಮಿ ಸುಮ್ನಿರೋದು?

ವಿಶ್ವನಾಥ : ವಿಷಯ ಏನು ಅನ್ನೋದನ್ನೆ ನೀವು ಹೇಳ್ತಾ ಇಲ್ವಲ್ಲಾ!

ಬೋರೇಗೌಡ : ಅದೊಂದು ದೊಡ್ಡ ಪುರಾಣವೆ ಆಯ್ತದೆ, ಸ್ವಾಮಿ.

ವಿಶ್ವನಾಥ : ಹೇಳಿ ಬೋರೇಗೌಡ್ರೆ, ಅದೇನು ನಾವು ಸ್ವಲ್ಪ ತಿಳ್ಕೋಳೋಣ.

ಬೋರೇಗೌಡ : ಇದ್ಕೆ ಒಂದು ತಿಂಗಳ ಹಿಂದೆ.... ಈ ಬೊಡ್ಡೀಹೈದ ಅನ್ನಕ್ಕೆ ಗತಿಯಲ್ದೇ ಈ ಚೌಕದಲ್ಲಿ ಸುಸ್ತಾಗಿ, ಸಂಕಟಪಡ್ತಾ ಬಿದ್ದಿದ್ದ. ನಾಲ್ಕೈದು ದಿನ ಆಗಿತ್ತಂತೆ ಸ್ವಾಮಿ ಅನ್ನದ ಮೊಕ ಕಂಡು.

ವಿಶ್ವನಾಥ : ಏನು ಅಷ್ಟೊಂದು ಸುಸ್ತಾಗಿದ್ನೆ!

ಬೋರೇಗೌಡ : ನಾನು ಅವತ್ತು ಇಲ್ಲಿಗೆ ಬರ್ದೇ ಹೋಗಿದ್ರೆ.... ಸತ್ತೆ ಹೋಯ್ತಿದ್ದನೇನೋ? ನಂಗೆ ಅವತ್ತು ಒಂದೆರಡು ಆಳುಗಳು ಬೇಕಾಗಿತ್ತು. ಸಿಕ್ಕರೇನೋ ಅಂತ ಹುಡಿಕ್ಕೊಂಡು ಇಲ್ಲಿಗೆ ಬಂದ್ರೆ.... ಇವನು ಕಣ್ಣಿಗೆ ಬಿದ್ದ.... ಇವ್ನ ಸ್ಥಿತಿ ನೋಡ್ಬುಟ್ಟು ನಂಗೆ ಹೊಟ್ಟೆ ಉರ್ದೋಯ್ತು ಸ್ವಾಮಿ.... "ಅಯ್ಯೋ ಪಾಪ" ಅಂತ ನನ್ಮನೆಗೆ ಕರ್ಕೊಂಡು ಹೋಗಿ, ಉಣ್ಣೋಕೆ ಇಕ್ಕಿಸ್ದೆ. ಆಗ ಒಸಿ ತ್ರಾಣ ಬಂತು...

(ವಿವರಿಸುತ್ತಿದ್ದಂತೆಯೇ ಮತ್ತೆ ಕೋಪ ಬಂದು)
ಅವತ್ತು ನನ್ಮನೇಲಿ ಅನ್ನ ತಿಂದು.... ಇವತ್ತು ನನಗೆ ಎರಡು ಬಗೆದ್ನಲ್ಲ.... ಈ ನನ್ಮಗನ್ನ....

(ಎನ್ನುತ್ತಾ ಮತ್ತೆ ಹೊಡೆಯಲೆಂದು ಮುನ್ನುಗ್ಗುತ್ತಾನೆ.)

ವಿಶ್ವನಾಥ : (ಬೋರೇಗೌಡರನ್ನು ತಡೆಯುತ್ತಾ)
ಅದೇನು ಪೂರ್ತಾ ಹೇಳಿ. ಬರಿ ಕೂಗಾಡೋದ್ರಿಂದ ಏನು ತಾನೇ ಪ್ರಯೋಜನ?

ಬೋರೇಗೌಡ : ನಮ್ಮ ಸಂಕಟ ನಿಮ್ಗೆ ಗೊತ್ತಾಗುದಿಲ್ಲ ಸ್ವಾಮಿ... ಇವನ್ನ ನಂಬ್ಕೊಂಡು ನನ್ನ ಗೇಮೆಯೆಲ್ಲಾ ಹೆಂಗೆ ತುಂಡಾಗ್ಹೋದೊ ಗೊತ್ತೆ?

ದೊಡ್ಡೈದ : ತುಂಡಾಗ್ಹೋದವು ಹೆಂಗಿದ್ರು ಆಗ್ಹೋಗವೆ. ಅದೇನು ನಡೀತು ಅಂತ ಎಲ್ಲಾನು ಹೇಳ್ಬುಡು.

ಬೋರೇಗೌಡ : ಥೂ.... ಅನ್ನಾಡಿ ನನ್ಮಗನೆ, ನಿಂಗೇನ್ಲಾ ನೋವು? ಮಾವನ ಮನೇಲಿ ಸೇರ್ಕೊಂಡು ಹೆಣ್ ಹ್ಯಾಟೆಯಂಗೆ ತಿರ್ಗಾಡ್ಕೊಂಡು ಮಜವಾಗಿ ಇದ್ದೀಯೆ.

ದೊಡ್ಡೈದ : ಇದೇನಣ್ಣ, ನನ್ನೂ ಬೊಯ್ಯುಕೆ ಎರೀಕೊಂಡೆ.... ಹೆಂಗೋ ಹೇಳಪ್ಪ ಅತ್ತಾಗೆ.

ಬೋರೇಗೌಡ : ನೋಡಿ ಸ್ವಾಮಿ, ಅದೇ.... ಮನೆಗೆ ಕರ್ಕೊಂಡು ಬಂದು ಉಣ್ಣಾಕಿಕ್ಕಿ, ಬೀಡಿಗೆ ಕಾಸ್ಕೊಟ್ಟು, ನನ್ತಾವೆ ಕೂಲಿನಾಲಿ ಮಾಡ್ಕೊಂಡು ಇರ್ಲಾ ಅಂತ ಹೇಳಿ, ಮಲಿಕೊಕ್ಕು ಜಾಗ ಕೊಟ್ಟೆ. ಒಂದು ಹದಿನೈದು ದಿನ ಚೆಂದಾಗೆ ಗೇದ. ಆಮೇಲೆ ಒಂದು ದಿನ ನನ್ನ ಹತ್ತಿರಕ್ಕೆ ಬಂದು "ನಿಮ್ತಾವೆ ಖಾಯಂ ಆಗಿ ಕೆಲ್ಸಕ್ಕೆ ಇದ್ಬುಡ್ತೀನಿ ಕಣ್ರಪ್ಪ. ಒಂದು ಐವತ್ತು ರೂಪಾಯಿ ಮುಂಗಡವಾಗಿ ಕೊಡಿ. ಕೂಲಿ ಮಾಡ್ದಂಗೆಲ್ಲಾ ಅಲ್ಲಲ್ಲೇ ದಿವಸ ಒಸೊಸಿ ಹಿಡ್ಕೊಳುರಿ'' ಅಂದ.

ವಿಶ್ವನಾಥ : ಅವ್ನೆ ಕೇಳಿದ್ನೋ ಅಥವಾ ಅವನ ಮೇಲೆ ಸ್ವಲ್ಪ ದುಡ್ಡಿರ್ಲಿ ಅಂತ ನೀವೆ ಕೊಟ್ರೋ?

ಬೋರೇಗೌಡ : ನಾನೆ ಮ್ಯಾಲ್ ಬಿದ್ದು ಕೊಡೂಕೆ.... ನಂಗೇನು ಹುಚ್ಚೆ ಸ್ವಾಮಿ!.... ನಾನು ಯಾರ್ಗೂ ಅಷ್ಟು ಸುಲಭದಲ್ಲಿ ಒಂದು ಪೈಸೆ ಬಿಚ್ಚು ಮಗ ಅಲ್ಲ. ಅಂಥಾದ್ರಲ್ಲಿ ಇವನ್ನ ನಂಬುಟ್ಟು.... ಐವತ್ತು ರೂಪಾಯಿ ಕೊಟ್ಟೆ. ಆವತ್ತೆ ಈ ಬಡ್ಡಿಹೈದ ಕೊಟ್ಟ ಕೈಯ. ಇವನು ನನ್ನ ದುಡ್ಡ ತಿನಕೊಂಡು ಎತ್ತಾಗಾರ ಕಣ್ಣಿಗೆ ಮರೆಯಾಗಿ ಹೊಂಟೋಗಿದ್ರೆ, ನಂಗಿಷ್ಟು ಹೊಟ್ಟೆ ಉರೀತಿರ್ಲಿಲ್ಲ. ನನ್ನ ಕಣ್ಣಿಗೆ ಮಣ್ಣೆರಚಿ.... ನಮ್ಮೂರಲ್ಲೆ ಬೇರೆಯವರ್ತಕೆ ಕೂಲಿಗೆ ಹೊಯ್ತಾವ್ನೆ. ಹಿಂಗೆ ನಂಬಿಸಿ ಮೋಸ ಮಾಡವ್ನಲ್ಲ.... ಇದ ನೀವು ಸರಿ ಅಂತೀರಾ? ಈ ಕಳ್‌ಸೂಳೆಮಗ ಮಾಡಿರೋದು ನ್ಯಾಯವೇ?.. ನೀವೇ ಹೇಳಿ?

ದೊಡ್ಡೈದ : ಈಸ್ಕೊವಾಗಿರೊ ಗ್ಯಾನ ಕೊಡುವಾಗ ಇರೊಕಿಲ್ವೇನಯ್ಯ? ಅನ್ನ ತಿಂದ ಮನೇಗೆ ಮಣ್ಣು ಹಿಡಿಯೊ ನನ್ಮಕ್ಳು.

ಬೋರೇಗೌಡ : ಅದ್ಕೆ ದೇವರು.... ಯಾವಾಗ್ಲು ಈ ನನ್ಮಕ್ಳ.... "ಹಿಟ್ಟಿಗಿದ್ರೆ ಬಟ್ಟೆಗೆ ಹೆಂಗಪ್ಪ.... ಬಟ್ಟೆಗಿದ್ರೆ ಹಿಟ್ಟಿಗೆ ಹೆಂಗಪ್ಪ" ಅನ್ನುವಂಗೆ ಇಟ್ಟವ್ನೆ.

ದೊಡ್ಡೈದ : ಬುಡಣ್ಣೋ.... ಈಗಿನ ಕಾಲದಲ್ಲಿ "ಕೊಟ್ಟೋನು ಕೋಡಂಗಿ, ಈಸ್ಕೊಂಡೋನು ಈರಭದ್ರ!"

ಬೋರೇಗೌಡ : ಈಸ್ಕೊಂಡೋನು ಈರಭದ್ರ!... ಇವತ್ತು ಈ ಬಡ್ಡಿಹೈದ್ನ ಎಲ್ಲಿಗ್ಲಾ ಬುಟ್‌ಬುಟ್ಟೇನು?... ನನ್ನ ದುಡ್ಡ ಕಕ್ಕಿಸ್ಕೊಂಡು ಅಲ್ವೆ ಮುಂದಕ್ಕೆ ಬುಡೋದು.
(ಕೂಲಿಯವ ಕಡೆಗೆ ನುಗ್ಗುತ್ತಾ)
ಲೇ ಮಡಗ್ಲಾ ನನ್ನ ದುಡ್ಡ.

ವಿಶ್ವನಾಥ : ಸ್ವಲ್ಪ ಸಮಾಧಾನ ಮಾಡ್ಕೊಳಿ.

ಬೋರೇಗೌಡ : ಸುಮ್ನೆ ನಿಂತ್ಕೊಳಿ ಮೇಷ್ಟ್ರೆ. ಈ ವಿಷಯದಲ್ಲಿ ನೀವು ತಲೆ ಹಾಕ್ಕೊಂಡು ಬರ್ಬೇಡಿ. ಈ ಬಡ್ಡೀ ಹೈದಂಗೆ ಇವತ್ತು ನಾನು ಹುಟ್ಟಿದ ದಿನ ಕಾಣಿಸ್ದೇ ಹೋದ್ರೆ.... ನಾನು ಅಪ್ಪಂಗುಟ್ಟಿದ ಮಗ್ನೆ ಅಲ್ಲ. ಲೇ ದೊಡ್ಡೈದ ಹೋಗ್ಲಾ.... ಆ ಬೇಲಿ ತಾವು ಒಂದು ಸರಿಯಾದ ಚಬ್ಬೆ ಮುರ್ಕೊಂಡು ಬರೋಗ್ಲೆ.

ದೊಡ್ಡೈದ : ಸುಮ್ನಿರಣ್ಣೋ.... ಸುಮ್ನಿರಣ್ಣೋ....

ಬೋರೇಗೌಡ : ಮುರ್‍ಕೊಂಡು ಬಂದಿಯೊ ಇಲ್ವಲಾ?....

(ಅಷ್ಟರಲ್ಲಿ ರಂಗದ ಬಲಬದಿಯಿಂದ ಇಂಜಿನಿಯರ್ ಒಬ್ಬರು ಹುಡುಗನೊಬ್ಬನೊಡನೆ ಬರುತ್ತಾರೆ. ಅವರನ್ನು ಕಂಡೊಡನೆ ಬೋರೇಗೌಡ ಬಹಳ ಅಚ್ಚರಿಗೊಂಡು, ಅತಿ ವಿಧೇಯತನದಿಂದ ಕೈ ಮುಗಿಯುತ್ತಾ)

....ನಮಸ್ಕಾರ ಬುದ್ಧಿ. ಇದೇನು ಬುದ್ಧಿ?.... ನಡ್ಕೊಂಡು ಬರ್‍ತಾ ಇದ್ದೀರಿ!.... ಕಾರು ಏನಾಯ್ತು ಬುದ್ಧಿ?

ಇಂಜಿನಿಯರ್ : ಕಾರ್‍ನಲ್ಲಿ ಜೀಪ್ನಲ್ಲಿ ತಿರುಗಿ ತಿರುಗಿ ಬೇಜರಾಗ್ಹೋಗಿದೆ ಬೋರೇಗೌಡ. ಸುಮ್ಮನೆ ಹಾಗೆ ಗಾಳೀಲಿ ತಿರ್‍ಗಾಡ್ಕೊಂಡು ಬರೋಣ ಅಂತ ಬಂದೆ.

ಬೋರೇಗೌಡ : (ಅವರ ಜೊತೆಯಲ್ಲಿದ್ದ ಹುಡುಗನ ಕಡೆ ನೋಡುತ್ತಾ)

ತಮ್ಮ ಮಗರಾ ಬುದ್ಧಿ.

ಇಂಜಿನಿಯರ್ : ಹೂ.

ಬೋರೇಗೌಡ : ಮೊಕದಲ್ಲಿ ಯಾವ ಕಳೇವು ಅದೆ ಸ್ವಾಮಿ. ನಿಮ್ಮಂಗೆ ದೊಡ್ಡ ಇಂಜಿನಿಯರ್ ಮಾಡ್ಬುಡಿ ಬುದ್ಧಿ.

ಇಂಜಿನಿಯರ್ : ಇಲ್ಲ.... ಇಲ್ಲ. ಅವನ್ನ ಡಾಕ್ಟರ್ ಮಾಡೋಣ ಅಂತ ಇದ್ದೀನಿ.

ಬೋರೇಗೌಡ : ಹಂಗಾರೆ ಇನ್ನೂ ಒಳ್ಳೇದೆ ಆಯ್ತು ಬುಡಿ ಬುದ್ಧಿ. ಡಾಕ್ಟರು ಮಾಡ್ಬೇಕಾದ್ರೆ ಭೋ ದುಡ್ಡು ಖರ್ಚಂತಲ್ಲ ಬುದ್ಧಿ!

ಇಂಜಿನಿಯರ್ : ಹೌದು ಬೋರೇಗೌಡ, ಒಂದೊಂದು ಸೀಟಿಗೇನೆ ಅರವತ್ತು ಸಾವಿರದಿಂದ ಒಂದೂವರೆ ಲಕ್ಷ ರೂಪಾಯಿ ಆಗುತ್ತೆ.

ಬೋರೇಗೌಡ : ಹಂಗಾರೆ ನಿಮ್ಮ ಮಗಾರ್‍ಗು ಕಟ್ಬುದ್ರಾ ಬುದ್ಧಿ.

ಇಂಜಿನಿಯರ್ : ಅರವತ್ತು ಸಾವಿರ ರೂಪಾಯಿ ಬರೀ ಸೀಟ್ಗೆ ಕಟ್ದೆ.

ಬೋರೇಗೌಡ : ಡಾಕ್ಟರಾಗಿ ಬರೋವತ್ಗೆ ಒಂದು ಲಕ್ಷ ಕೈ ಬುಟ್ಹೋಯ್ತದೆ ಅನ್ನಿ.

ಇಂಜಿನಿಯರ್ : ಒಂದು ಲಕ್ಷ.... ಸಾಕಾಗುವುದಿಲ್ಲ.

ಬೋರೇಗೌಡ : ಓ.... ನಿಮ್ಗೆ ಅದ್ಯಾವ ಲೆಕ್ಕ ಬುಡೀ ಬುದ್ಧಿ. ದೇವರು ಕೊಟ್ಟವ್ನೆ, ಖರ್ಚು ಮಾಡಿ ಸ್ವಾಮಿ. ಡಾಕ್ಟ್ರಾಗಿ ಬಂದ್ಮೇಲೆ ಅದರ ಹತ್ತರಷ್ಟು ಸಂಪಾದ್ನೆ ಮಾಡಿ ಕೊಡ್ತಾರೆ.

ಇಂಜಿನಿಯರ್ : ಏನೋ ಎಲ್ಲಾ ಆ ಭಗವಂತನ ಕೃಪೆ. ನಮ್ಮ ಕೈಲಿ ಏನಿದ್ದದು?.... ನಾನು ಬರ್ತೀನಿ ಬೋರೇಗೌಡ.

ಬೋರೇಗೌಡ : ಹೂ ನಡೀರಿ ಬುದ್ಧಿ.... ನಡೀರಿ.

(ಎಂದು ಕೈ ಮುಗಿಯುತ್ತಾನೆ. ಇಂಜಿನಿಯರ್ ತಮ್ಮ ಮಗನೊಡನೆ ನಿರ್ಗಮಿಸುತ್ತಾರೆ.)

ವಿಶ್ವನಾಥ : ಬೋರೇಗೌಡ್ರೆ.... ಯಾರು ಅವರು?

ಬೋರೇಗೌಡ : ನಿಮ್ಗೆ ಗೊತ್ತಿಲ್ವೆ ಸ್ವಾಮಿ ಅವರ್ಯಾರು ಅಂತ!

ವಿಶ್ವನಾಥ : ಗೊತ್ತಿಲ್ಲ.

ಬೋರೇಗೌಡ : (ಬಹಳ ಉತ್ಸಾಹದಿಂದ)

ನಮ್ಮ ಜಿಲ್ಲೆನಲ್ಲೆ ಭೋ ಪ್ರಸಿದ್ಧಿ. ಅವರ ಹೆಸ್ರು ಕೇಳ್ದೆ ಇರೋರೆ ಇಲ್ಲ. ಎಜ್ಜುಕುಟೀವ್ ಇಂಜಿನಿಯರ್ ಆಗವ್ರೆ. ಒಳ್ಳೆ ಪುಣ್ಯಾತ್ಮರು ಸ್ವಾಮಿ. ಚೆನ್ನಾಗಿ ಕೇಳ್ಕೊಂಡು ಬಂದವ್ರೆ ವರವಾ!

ವಿಶ್ವನಾಥ : ಏನು ಅಷ್ಟೊಂದು ಅನುಕೂಲವಾಗಿದ್ದರಾ?

ಬೋರೇಗೌಡ : ಇದೇನ್ ಸ್ವಾಮಿ ಹಿಂಗೆ ಕೇಳ್ತೀರಿ? ಅವರ ಮನೇಲಿ ಲಕ್ಷ್ಮಿ ಕಾಲ್ಕಸವಾಗಿ ಬಿದ್ದು ಒದ್ದಾಡ್ತಾವ್ಳೆ! ಅವರು ಯಾವಾವ ಊರ್ಗೆ ಇಂಜಿನಿಯರ್ ಆಗಿ ಹೋಗಿದ್ರೊ.... ಅಲ್ಲೆಲ್ಲಾ ಒಂದೊಂದು ಮನೆ ಕಟ್ಟವ್ರೆ. ಬೆಂಗಳೂರಲ್ಲಿ ಒಂದು, ಮೈಸೂರಲ್ಲಿ ಒಂದು, ಹಾಸನದಲ್ಲಿ ಒಂದು. ಈಗ ಈ ಊರ್ನಲ್ಲೂ ಒಂದು ಕಟ್ಸೊಕೆ ಎಲ್ಲಾ ಏರ್ಪಾಡು ಮಾಡವ್ರೆ.

ವಿಶ್ವನಾಥ : ಇಷ್ಟೇನೋ ಆಸ್ತಿ, ಇನ್ನು ಏನಾದ್ರು ಇದೆಯೋ?

ಬೋರೇಗೌಡ : ನೀವು ಬೆಂಗಳೂರಲ್ಲಿ ಕಟ್ಟಿರೊ ಮನೆಯ ಹೋಗಿ ನೋಡ್ಬೇಕು. ಎರಡು ಕಣ್ಣು ಸಾಲೂದಿಲ್ಲ. ಮನೆ ತಾವು ಒಂದು ಕಾರು ಎರಡು ಸ್ಕೂಟ್ರು ಎಷ್ಟೊತ್ತು ಯಾವ ಗಳಿಗೇಲೂ ರೆಡಿಯಾಗಿ ನಿಂತಿವೆ. ಅವರ ಹೆಂಗಸರ ಮೈಮೇಲೆ ಒಂದು ಒಡವೆಗಳು ಅವೆ....ಅವೆ ಸ್ವಾಮಿ, ಏನಿಲ್ಲ ಅಂದ್ರ ಒಂದು ಅರವತ್ತು ಎಪ್ಪತ್ತು ತೊಲ ಬಂಗಾರ ಇರ್ಬೇಕು. ಸಾಕ್ಷಾತ್ ಮಹಾಲಕ್ಷ್ಮಿ ನೋಡ್ದಂಗಾಯ್ತದೆ.

ವಿಶ್ವನಾಥ : ಇದ್ನೆಲ್ಲಾ ಅವರ ತಂದೆಯವರೆ ಸಂಪಾದ್ನೆ ಮಾಡಿ ಇಟ್ಟಿದ್ರೊ?

ಬೋರೇಗೌಡ : ಅವರಪ್ಪಾರು ಏನು ಅಂಥ ಅನುಕೂಲವಾಗಿರ್ಲಿಲ್ಲ ಬುಡಿ. ಮತ್ತ ಇವರ ಓದ್ಸೋಕೆ ಅಲ್ಲಿ ಇಲ್ಲಿ, ಸ್ವಲ್ಪ ಸಾಲ ಸೋಲಾನೆ ಮಾಡಿದ್ರು. ಇದೆಲ್ಲ ಇವರು ಇಂಜಿನಿಯರ್ ಆಗಿ ಕೆಲ್ಸಕ್ಕೆ ಸೇರಿದ ಮ್ಯಾಲೆ ಸಂಪಾದ್ನೆ ಮಾಡಿರೋದು.

ವಿಶ್ವನಾಥ : ಬರಿ ಸಂಬಳದಲ್ಲೆ ಇಷ್ಟೆಲ್ಲಾ ಸಂಪಾದ್ನೆ ಮಾಡವ್ರೆ ಅಂತೀರಾ?

ಬೋರೇಗೌಡ : (ಜೋರಾಗಿ ನಗುತ್ತಾ)

ಬರೀ ಸಂಬಳದಲ್ಲೆ ಏನು ಮಾಡುಕಾದದು?....
ಮ್ಯಾಲ್ ಸಂಪಾದ್ನೆ ಚೆನ್ನಾಗದೆ ಸ್ವಾಮಿ.

ವಿಶ್ವನಾಥ : ಆ ರೀತಿ ಹಣ ಸಂಪಾದ್ನೆ ಮಾಡೋದು ನ್ಯಾಯವೆ ಬೋರೇಗೌಡ್ರೆ?

ಬೋರೇಗೌಡ : ನ್ಯಾಯವೋ?... ಅನ್ಯಾಯವೋ? ಅದ ಕಟ್ಕೊಂಡು ನಮಗೆ ಏನಾಗ್ಬೇಕು. ದೇವರು ಸಂಪಾದನೆ ಮಾಡೊ ಮಾರ್ಗ ತೋರ್ಸವ್ನೆ, ಪುಣ್ಯಾತ್ಮರು ಸಂಪಾದ್ನೆ ಮಾಡ್ತಾವ್ರೆ.

ವಿಶ್ವನಾಥ : (ಬೋರೇಗೌಡರಿಂದ ಏಟು ತಿಂದಿದ್ದ ಕೂಲಿಯವನ ಕಡೆಗೆ ಕೈ ತೋರಿಸುತ್ತಾ)

ಈ ಕೂಲಿಯವನು ಹಾಗೇನೆ ಐವತ್ತು ರೂಪಾಯ್ನ ನಿಮ್ಕಿಂದ ನ್ಯಾಯವಾಗೋ ಅನ್ಯಾಯವಾಗೋ ತಿನ್ಕೊಂಡ ಅನ್ಕೊಂಡು, ಇವ್ನ ಬುಟ್ಬುಡಿ.

ಬೋರೇಗೌಡ : ಅದೆಂಗ್ ಸ್ವಾಮಿ ಬುಟ್ ಬುಟ್ಟೇರಿ. ಇದು ನನ್ನ ರಕ್ತ ಬಸಿದ ದುಡ್ಡಲ್ವೆ ?

ವಿಶ್ವನಾಥ : ಆ ಇಂಜಿನಿಯರ್ ಗೋರಿ ಗುಡ್ಡೆ ಹಾಕಿರೋದು ನಿಮ್ಮಂಥ ಲಕ್ಷಾಂತರ ಮಂದಿ ಪ್ರಜೆಗಳ ರಕ್ತ ಬಸಿದ ದುಡ್ಡಲ್ವೆ? ಸಮಾಜದ ಅಭಿವೃದ್ಧಿ ಕಾರ್ಯಗಳಿಗೆ ಮೀಸಲಾದ ಹಣವನ್ನು, ಹೀಗೆ ಅಂಗ್ಲಿಲ್ಲದೆ ನುಂಗುತ್ತಿರುವ ಅಂಥಾವರು ನಿಮ್ಮ ಕಣ್ಣಿಗೆ ಪುಣ್ಯಾತ್ಮರಂಗೆ ಕಾಣ್ತಾರೆ.... ಕಷ್ಟ ಪಟ್ಟು ದುಡಿದು, ಬೆವರು ಸುರಿಸಿ, ಅವತ್ತಿನ ಅನ್ನವನ್ನು ಅವತ್ತೇ ಹುಟ್ಟಿಸ್ಕೊಂಡು ಉಣ್ಣುವ ಇಂಥಾ ಬಡವರು ಗಂಟು ಕಳ್ಳರಂಗೆ ಕಾಣ್ತರೆ.... ಅವರ ಹೆಂಡ್ತೀರು ಮಹಾಲಕ್ಷ್ಮೀರಂಗೆ ಕಾಣ್ತಾರೆ.... ಇವರ ಹೆಂಡ್ತೀರು ಬೀದಿಲಿ ತಿರ್ಗು ಬಸವಿರಂಗೆ ಕಾಣ್ತಾರಲ್ಲವೇ?

ಬೋರೇಗೌಡ : ಏನು ಸ್ವಾಮಿ, ಮಾತ ಎತ್ಲಿಂದ ಎತ್ತೆತ್ತಗೋ ಭೋ ತೂರ್ಸಿ ಆಡ್ತಾ ಇದ್ದೀರಿ?

ವಿಶ್ವನಾಥ : ಜನಕ್ಕೆ ವಂಚನೆ ಮಾಡಿ ಇಂಥಾ ಕೆಟ್ಟ ರೀತಿಯಲ್ಲಿ ಹಣ ಸಂಪಾದ್ನೆ ಮಾಡ್ತಿರೋರನ್ನ.... ಸಮಾಜ ದ್ರೋಹಿಗಳು ಅಂತ ಉಗಿಬೇಕೋ? ಅಥವಾ ದೊಡ್ಡ ಮನುಷ್ಯರು ಅಂತ ಗೌರವಿಸಬೇಕೋ?.... ನೀವೇ ಹೇಳಿ.

ಬೋರೇಗೌಡ : ಓ.... ಅಂತಾ ದೊಡ್ಡೋರ ಸುದ್ದಿ ನಮಗ್ಯಾಕೆ?

ವಿಶ್ವನಾಥ : ನೀವು ನಾವೆಲ್ಲರೂ ಹೀಗೆ ಅನ್ಕೊಂಡೆ ನಮ್ಮ ದೇಶ ಹಾಳ್ಮಾಡ್ತಾ ಇದ್ದೀವಿ. ನಮ್ಮ ಕಣ್ಣ ಮುಂದೇನೆ ಈ ದೇಶ ಹತ್ತಾರು ಸಮಸ್ಯೆಗಳಿಂದ ಹತ್ಕೊಂಡು ಬೇಯ್ತಾ ಇದ್ರೂ, ನಮ್ಗೂ ಈ ದೇಶಕ್ಕೂ ಸಂಬಂಧವೇ ಇಲ್ದೆ ಇದ್ದೋರಂಗೆ ತೆಪ್ಪಗಿದ್ದೀವಿ. ನೋಡಿ ಬೋರೇಗೌಡ್ರೆ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರೋದಕ್ಕೆ ಮುಂಚೆ ನಾವು ಗುಲಾಮರಾಗಿ ಬಾಳ್ತಿದ್ದೊ. ನಿಮ್ಗೂ ಗೊತ್ತಿರಬೇಕು ಆ ವಿಷಯ.

ಬೋರೇಗೌಡ : ಆ ಪರಂಗಿಯವರ ಕಾಲವೆ ಎಷ್ಟೋ ಚೆನ್ನಾಗಿತ್ತು ಸ್ವಾಮಿ.

ವಿಶ್ವನಾಥ : ನಮ್ಮ ದೇಶದಲ್ಲಿ ಜನ ಗಾಂಧೀಜಿಯವರ ಮುಖಂಡತ್ವದಲ್ಲಿ ಗುಲಾಮತನದ ವಿರುದ್ಧ ಹೋರಾಟ ಮಾಡ್ತಿದ್ದಾಗ, ಇಂಗ್ಲೆಂಡ್ ದೇಶದಲ್ಲಿ ಚರ್ಚಿಲ್ ಅನ್ನೊ ಪ್ರಧಾನಿ ಇದ್ದ. ಅವನು ನಮ್ಮ ದೇಶದವರ ಬಗ್ಗೆ ಏನಂತ ಹೇಳಿದ್ದ ಗೊತ್ತೆ?

ಬೋರೇಗೌಡ : ಏನಂದಿದ್ದ?

ವಿಶ್ವನಾಥ : "ಇಂಡಿಯಾ ದೇಶದ ಜನರಿಗೆ ಸ್ವಾತಂತ್ರ್ಯ ಕೊಡೋದು ಬೇಡ. ಯಾಕಂದ್ರೆ ಒಂದು ವೇಳೆ ಸ್ವಾತಂತ್ರ್ಯವನ್ನು ಕೊಟ್ಟಿದ್ದೆ ಆದ್ರೆ, ಆ ದೇಶವನ್ನು ಆಳುವ

ರಾಜಕಾರಣಿಗಳು ಮತ್ತು ಸರ್ಕಾರಿ ಸಂಬಳ ತಿನ್ನುವ ಅಕ್ಷರವಂತ ಜನ ಇನ್ನು ಕೇವಲ ಮುವತ್ತು ವರ್ಷಗಳಲ್ಲಿ, ಆ ದೇಶದ ಸಮಸ್ತ ಆಸ್ತಿಯನ್ನು ತಮ್ಮ ಸ್ವಾರ್ಥಕ್ಕಾಗಿ ಲೂಟಿ ಹೊಡೆದು ದೇಶವನ್ನು ಸಂಪೂರ್ಣವಾಗಿ ಹಾಳು ಮಾಡ್ತಾರೆ. ಭಾರತೀಯರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ" ಅಂತ ಭವಿಷ್ಯ ನುಡಿದಿದ್ದ.

ಬೋರೇಗೌಡ : ಹಿಂಗಂತ ಆಗ್ಲೆ ಹೇಳ್ಬುಟ್ಟಿದ್ನೆ ಸ್ವಾಮಿ!

ವಿಶ್ವನಾಥ : ಹೌದು. ಅವನ ಮಾತು ಎಷ್ಟರ ಮಟ್ಟಿಗೆ ಈಗ ಸತ್ಯ ಆಗಿದೆ ಅನ್ನೋದನ್ನ ನೀವೇ ಕಣ್ಣಾರೆ ನೋಡಿ ಬೋರೇಗೌಡ್ರೆ...

(ವಿಶ್ವನಾಥನ ಮಾತು ಮುಗಿಯುತ್ತಿದ್ದಂತೆಯೇ ರಂಗದ ಮೇಲೆ ಕತ್ತಲು ಆವರಿಸುತ್ತದೆ. ರಂಗದ ಮೇಲಿದ್ದವರೆಲ್ಲರೂ ನೇಪಥ್ಯಕ್ಕೆ ಸರಿಯುತ್ತಾರೆ. ಮತ್ತೆ ಬೆಳಕು ವ್ಯಾಪಿಸಿದಾಗ ಕೊಠಡಿಯೊಂದರಲ್ಲಿ ಎಂ.ಎಲ್.ಎ., ಒಬ್ಬರು ಅತ್ತಿಂದಿತ್ತ ಇತ್ತಿಂದತ್ತ ತಿರುಗುತ್ತಿದ್ದಾರೆ. ಅಷ್ಟರಲ್ಲಿ ಅಲ್ಲಿಗೆ ತಹಶೀಲ್ದಾರ್ ಆಗಮಿಸುತ್ತಾರೆ.)

ತಹಶೀಲ್ದಾರ್ : ನಮಸ್ಕಾರ್ ಸಾರ್.

ಎಂ.ಎಲ್.ಎ. : ನಮಸ್ಕಾರ.... ನೀವೇನೊ ಪಟ್ಟಣದ ತಹಶೀಲ್ದಾರ್?

ತಹಶೀಲ್ದಾರ್ : ಹೌದು ಸಾರ್.

ಎಂ.ಎಲ್.ಎ. : ಏನ್ರಿ, ರೂಲ್ಸು ಗೀಲ್ಸು ಅಂತ ಹೇಳ್ಕೊಂಡು ನಮ್ಮ ಜನಗಳಿಗೆ ವಿಪರೀತ ತೊಂದ್ರೆ ಕೊಡ್ತಾ ಇದ್ದೀರಂತೆ.

ತಹಶೀಲ್ದಾರ್ : ಇಲ್ಲ ಸಾರ್.... ಇಲ್ಲ.

ಎಂ.ಎಲ್.ಎ. : ಏನ್ರಿ ಇಲ್ಲ?.... ಜನಗಳು ತಮ್ಮದೊಂದು ಕೆಲ್ಸ ಮಾಡಿಸ್ಕೊಳ್ಳಬೇಕಾದ್ರೆ, ತಾಲ್ಲೂಕು ಆಫೀಸಿನ ಮೆಟ್ಟಲನ್ನ ನೂರು ಸತಿ ತುಳಿಬೇಕೇನು?

ತಹಶೀಲ್ದಾರ್ : ಹಾಗೇನಿಲ್ಲ ಸಾರ್. ನಾನು ಯಾರಿಗೂ ಆ ರೀತಿ ಉದ್ದೇಶ ಪೂರ್ವಕವಾಗಿ ತೊಂದ್ರೆ ಮಾಡಿಲ್ಲ ಸಾರ್.

ಎಂ.ಎಲ್.ಎ. : ಯಾಕ್ರಿ ಮಾಡಿಲ್ಲ?.... ರಾಮಚಂದ್ರ ಅನ್ನೋರು ದರಖಾಸ್ತು ಭೂಮಿಗೆ ಅರ್ಜಿ ಕೊಟ್ಟು ಎಷ್ಟು ತಿಂಗ್ಳಾಗಿದೆ? ಅವರು ನಿಮ್ಮ ಆಫೀಸಿಗೆ ಇದುವರ್ಗೆ ಎಷ್ಟು ಸತಿ

ಅಲೆದಿದ್ದಾರೆ?.... ನಿಮ್ಮನ್ನು ಎಷ್ಟು ಸಾರಿ ಖುದ್ದಾಗಿ ಕಂಡಿದ್ದಾರೆ?.... ಅವರ್ದು ಏನಾದ್ರು ಒಂದು ಚೂರು ಕೆಲ್ಸ ಆಗಿದೆಯೇನ್ರಿ ?

ತಹಶೀಲ್ದಾರ್ : ಸಾರ್, ರಾಮಚಂದ್ರ ಅವರು ದರಖಾಸ್ತಿನಲ್ಲಿ ಅರ್ಜಿ ಸಲ್ಲಿಸಿರುವ ಹದಿನೈದು ಎಕರೆ ಭೂಮಿಯನ್ನು ಈಗಾಗಲೇ ಹತ್ತು ವರ್ಷಗಳಿಂದ ಕೆಲವು ಬಡ ಕುಟುಂಬದವರು ಸಾಗುವಳಿ ಮಾಡ್ಕೊಂಡು ಜೀವನ ಮಾಡ್ತಾ ಇದ್ದಾರೆ. ಈಗೇನಿದ್ರು ಆ ಜಮೀನನ್ನು ಆ ಬಡವರಿಗೆ ಮಂಜೂರು ಮಾಡ್ಬೇಕೆ ವಿನಹ, ಬೇರೆಯವರಿಗೆ ಮಂಜೂರು ಮಾಡೋಕೆ ಆಗೊಲ್ಲ ಸಾರ್.

ಎಂ.ಎಲ್.ಎ. : ಯಾಕ್ರಿ ಆಗೊಲ್ಲ? ಅದು ಸರ್ಕಾರಿ ಭೂಮಿ ಅಲ್ವೇನ್ರಿ?

ತಹಶೀಲ್ದಾರ್ : ಸರ್ಕಾರಿ ಭೂಮಿಯಾಗಿದ್ರು, ಅದನ್ನು ಈಗಾಗಲೇ ಒಕ್ಕಲುತನ ಮಾಡ್ತಾ ಇರೋ ಭೂ ರಹಿತ ಬಡ ಬಗ್ಗರಿಗೆ ಕೊಡಬೇಕು ಅಂತ ಸರ್ಕಾರದ ಆದೇಶವಿದೆ ಸಾರ್.

ಎಂ.ಎಲ್.ಎ. : ಬಡವರು.... ಬಗ್ಗರು. ಈ ಹಾಳಾದ ಬಡವರಿಗೆ ಇಡೀ ಬ್ರಹ್ಮಾಂಡವನ್ನೇ ದರಖಾಸ್ತಿನಲ್ಲಿ ಹಂಚಿಕೊಟ್ಟರು ಅವರ ಬರ ಹಿಂಗೋದಿಲ್ಲ ಅಂತ ಕಾಣ್ಸುತ್ತೆ!

ತಹಶೀಲ್ದಾರ್ : ಏನು ಮಾಡೋದು ಸಾರ್? ಸರ್ಕಾರದ ಕಾನೂನು ಕಟ್ಟಲೆಗಳು ಆ ರೀತಿ ಇವೆ?

ಎಂ.ಎಲ್.ಎ. : ಕಾನೂನು... ಕಾನೂನು ಅಂತ ಯಾಕ್ರಿ ಹೊಡ್ಕೊಳ್ತೀರಾ? ಸಮಯ ಸಂದರ್ಭಕ್ಕೆ ತಕ್ಕಂತೆ ಕಾನೂನಿನಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳನ್ನು ಮಾಡಿಕೊಳ್ಳಲೇ ಬೇಕಾಗುತ್ತದೆ. ನಾನ್ಯಾರು ಅಂತ ಗೊತ್ತಿದೆಯೇನ್ರಿ ನಿಮಗೆ?

ತಹಶೀಲ್ದಾರ್ : (ಮೌನದಿಂದ ನೋಡುತ್ತಾರೆ.)

ಎಂ.ಎಲ್.ಎ. : ಈ ರಾಜ್ಯದ ಒಬ್ಬ ಪ್ರತಿಷ್ಠಿತ ಎಂ.ಎಲ್.ಎ... ಈಗಾಗಲೇ ಅನೇಕ ಬಾರಿ ಕಾನೂನು ಕಟ್ಟಲೆಗಳಲ್ಲಿ ಬೇಕಾದಷ್ಟು ಬದಲಾವಣೆಗಳನ್ನು ಮಾಡಿರೋನು ನಾನು. ನಮ್ಮ ರಾಜ್ಯದ ಶ್ರೇಯಸ್ಸಿಗಾಗಿ, ನಮ್ಮ ಸಮಾಜದ ಹಿತಕ್ಕಾಗಿ, ನನಗೆ ಬೇಕಾದ ನಾಲ್ಕು ಜನರ ಒಳ್ಳೇದಕ್ಕಾಗಿ...ಇನ್ನು ಮುಂದಕ್ಕೂ ಕೂಡ ಏನು ಬೇಕಾದ್ರು ಬದಲಾವಣೆ ಮಾಡುವಂಥ ಶಕ್ತಿ ಇರೋನು.

ತಹಶೀಲ್ದಾರ್ : (ಆರ್ಭಟಿಸುತ್ತಿರುವ ಎಂ.ಎಲ್.ಎ. ಅವರನ್ನೇ ನೋಡುತ್ತಿರುತ್ತಾರೆ.)

ಎಂ.ಎಲ್.ಎ. : ನೋಡ್ರಿ, ಚೆನ್ನಾಗಿ ತಿಳ್ಕೊಳಿ.... ನಾನು ಮನಸ್ಸು ಮಾಡುದ್ರೆ ನಿಮ್ಮನ್ನ ಏನು ಬೇಕಾದ್ರು ಮಾಡಬಲ್ಲೆ. ಹೋಗ್ರಿ, ಈ ಕೂಡ್ಲೇನೆ ರಾಮಚಂದ್ರ ಅವರ ಅರ್ಜಿಯನ್ನು ಸ್ಪೆಷಲ್ ಕೇಸ್ ಅಂತ ಪರಿಗಣಿಸಿ ಅವರಿಗೆ ಜಮೀನು ಮಂಜೂರು ಮಾಡಿ.

ತಹಶೀಲ್ದಾರ್ : ಹಾಗಾದ್ರೆ ಆ ಬಡವರನ್ನೆಲ್ಲಾ ಅಲ್ಲಿಂದ ಒಕ್ಕಲೆಬ್ಬಿಸಬೇಕಾಗುತ್ತೆ ಸಾರ್. ಹುಲ್ಲು ಹುಟ್ಟದಿದ್ದ ಜಾಗದಲ್ಲಿ ಬಹಳ ಕಷ್ಟಪಟ್ಟು ದುಡಿದು, ಆ ಭೂಮಿಯನ್ನು ಒಂದು ಹದಕ್ಕೆ ತಂದು, ಒಂದಿಷ್ಟು ಬೆಳೆ ತೆಗೆದು ಅಂಬಲಿ ಕುಡ್ಕೊಂಡು ಜೀವನ ಮಾಡ್ತಾ ಇದ್ದಾರೆ. ಈಗ ಅವರನ್ನ ಅಲ್ಲಿಂದ ಆಚೆಗೆ ಹಾಕೋದು ಅಂದ್ರೆ ಬಹಳ ಸಂಕಟ ಆಗುತ್ತೆ ಸಾರ್. ಅದೂ ಅಲ್ಲದೆ ಅವರೆಲ್ಲಾ ಈಗಾಗ್ಲೆ ಅನೇಕ ಗುಡಿಸಲುಗಳನ್ನು ಕಟ್ಕೊಂಡು, ಅಲ್ಲೆ ವಾಸ ಮಾಡ್ತಾ ಇರೋದರಿಂದ ಅಲ್ಲಿಂದ ಅವರನ್ನು ಖಾಲಿ ಮಾಡಿಸುವುದು ಕಾನೂನಿನ ದೃಷ್ಟಿಯಿಂದಲೂ ಬಹಳ ಕಷ್ಟ ಆಗುತ್ತೆ ಸಾರ್.

ಎಂ.ಎಲ್.ಎ : ಏನ್ರಿ ಕಷ್ಟ ಆಗುತ್ತೆ? ಅಧಿಕಾರವನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಅನ್ನು ಗತ್ತೆ ಗೊತ್ತಿಲ್ವಲ್ರಿ ನಿಮಗೆ? ಎಂಥಾ ತಹಶೀಲ್ದಾರಿಕೆ ಮಾಡ್ತೀರಿ ನೀವು?.... ನೋಡ್ರಿ, ಆ ಬಡವರು ಏನಾದ್ರೂ ಭೂಮಿ ಬಿಡುವುದಕ್ಕೆ ತಂಟೆ ತಕರಾರು ಮಾಡುದ್ರೆ, ಅವರ್ನೆಲ್ಲ ಒದ್ದು ಅರೆಸ್ಟ್ ಮಾಡ್ಸಿ, ಒಂದು ನಾಲ್ಕು ದಿವಸ ಪೊಲೀಸ್ ಸ್ಟೇಷನ್ನಿನಲ್ಲಿ ಹಾಕಿಸಿ, ಕೊಳಿಸಿ. ಆ ಗುಡಿಸಲಲ್ಲಿ ಇರುವ ಮಡ್ಕೆ ಕುಡ್ಕೆನೆಲ್ಲಾ ಆಚೆಗೆ ಎಸೆದು, ಅಲ್ಲಿ ಗುಡಿಸಲುಗಳು ಇದ್ವೊ ಅನ್ನು ಗುರುತು ಸಿಗಬಾರ್ದು, ಹಾಗೆ ಅವನ್ನೆಲ್ಲಾ ನೆಲಸಮ ಮಾಡ್ಸಿ. ನೀವೇನೂ ಹೆದರ್ಕೊಳ್ಬೇಡಿ. ಇದನ್ನೆಲ್ಲಾ ಪೊಲೀಸ್ ಪ್ರೊಟೆಕ್ಷನ್ ತೆಕೊಂಡು ಮಾಡ್ರಿ. ನಾನು ಈಗ್ಲೆ ಎಸ್.ಪಿ.ಗೆ ಫೋನ್ ಮಾಡ್ತೀನಿ. ಸರ್ಕಲ್ ಇನ್ಸ್ಪೆಕ್ಟರ್.... ಸ್ಪಾಟಿಗೆ ಬರುವಂಗೆ ಏರ್ಪಾಟು ಮಾಡ್ತೀನಿ. ಹೋಗ್ರಿ ಈ ತಕ್ಷಣ ಆ ಭೂಮಿಯನ್ನು ರಾಮಚಂದ್ರ ಅವರಿಗೆ ಮಂಜೂರು ಮಾಡಿ.

ತಹಶೀಲ್ದಾರ್ : ಆಗ್ಲಿ ಸಾರ್. ಅರ್ಜಿದಾರ ರಾಮಚಂದ್ರ ಅವರು ತಮ್ಮ ಅಳಿಯಂದಿರಂತೆ ಸಾರ್.

ಎಂ.ಎಲ್.ಎ. : ಹಾಗಂತ ನಾನೆ ಬಾಯ್ಬಿಟ್ಟು ಹೇಳ್ಬೇಕೇನ್ರಿ?

ತಹಶೀಲ್ದಾರ್ : ಬೇಡಿ ಸಾರ್. ನನಗೆ ಎಲ್ಲಾ ಗೊತ್ತಾಗಿದೆ. ಈಗ ಹೋದ ಕೂಡ್ಲೆ ಮಂಜೂರು ಮಾಡ್ತೀನಿ ಸಾರ್. ನಮಸ್ಕಾರ ಸಾರ್.

(ಎಂದು ಹೇಳಿ ಅಲ್ಲಿಂದ ಹೊರಡುತ್ತಾರೆ.)

ಎಂ.ಎಲ್.ಎ. : (ಸ್ವಗತ)

ಈಗಿನ ಅಧಿಕಾರಿಗಳ್ಗೆ ಸ್ವಲ್ಪನಾದ್ರು ಕಾಮನ್‌ಸೆನ್ಸ್ ಇಲ್ಲ. ನಮ್ಮ ಹೈಕಮಾಂಡ್ ಹೇಳುತ್ತೆ "ಪಕ್ಷದ ಕಾರ್ಯಕ್ರಮಗಳನ್ನು ಅರ್ಥ ಮಾಡ್ಕೊಂಡು, ಅದನ್ನ ಆಚರಣೆಗೆ ತರುವಂಥ ಶ್ರದ್ಧೆ ಅಧಿಕಾರಿಗಳಲ್ಲಿ ಇರಬೇಕು" ಅಂತ. ಪಕ್ಷದ್ದು ಇರಲಿ.... ನಮ್ಮ ಉದ್ದೇಶ ಏನು ಅನ್ನೋದನ್ನ ಅರ್ಥ ಮಾಡ್ಕೊಂಡು ಕೆಲಸ ಮಾಡೋಕೆ ಬರೋದಿಲ್ವಲ್ಲ. ಇಂಥಾವರ್ನೆಲ್ಲಾ ಏನ್ ಮಾಡ್ಬೇಕು?

(ಅಷ್ಟರಲ್ಲಿ ರಂಗದ ಎಡಬದಿಯಿಂದ "ಬಡವರ ಬಂಧುವಿಗೆ.... ಜಯವಾಗಲಿ," "ದೀನದಲಿತರ ಉದ್ಧಾರಕನಿಗೆ.... ಜಯವಾಗಲಿ" ಎಂದು 8-10 ಮಂದಿ ಜೈಕಾರ ಹಾಕುತ್ತ ಬರುತ್ತಾರೆ. ಅವರೆಲ್ಲರ ಕೈಯಲ್ಲಿ ಒಂದೊಂದು ಹಾರಗಳಿವೆ. ಅವರ ಮುಖಂಡ ಹಾರವನ್ನು ಹಾಕಿದ ಮೇಲೆ, ಇತರರು ಎಂ.ಎಲ್.ಎ. ಕೊರಳಿಗೆ ಒಬ್ಬೊಬ್ಬರಾಗಿ ಹಾರ ಹಾಕಿ ಕೈ ಮುಗಿಯುತ್ತಾರೆ.)

ಕೊತ್ತಿಬುಡ್ಡ : ನಾನು ಈ ಬಡವರ್ಗೆಲ್ಲ ಮುಖಂಡ ಕನ್ ಸಾ. ನನ್ನ ಹೆಸರು ಕೊತ್ತಿಬುಡ್ಡ ಅಂತ ಸಾ.

ಎಂ.ಎಲ್.ಎ. : (ತಮ್ಮ ಕೊರಳಲ್ಲಿ ಅಲಂಕೃತವಾಗಿದ್ದ ಹಾರಗಳನ್ನೆಲ್ಲಾ ಹೆಮ್ಮೆಯಿಂದ ನೋಡಿಕೊಳ್ಳುತ್ತಾ)
ಏನಯ್ಯ ನಿನ್ನ ಹೆಸರು ಕೊತ್ತಿಬುಡ್ಡ ಅಂತ್ಲಾ?

ಕೊತ್ತಿಬುಡ್ಡ : ಹೂ ಕನ್ ಸಾ. ನಾನೆ ಕೊತ್ತಿಬುಡ್ಡ, ಮೊನ್ನೆ ಎಲೆಕ್ಷನ್ನಲಿ ನಿಮಗಾಗಿ ಹಗಲು ರಾತ್ರಿ ಅನ್ದೆ ದುಡ್ದೆ. ನಮ್ಮ ಹಳೆ ಕೇರಿಲಿ "ಇದ್ದೋರ್ದು ಇಲ್ದೋ ಹೋದೋರ್ದು, ಮುದುಕರ್ದು ಮೋಟರ್ದು, ಸತ್ತೋರ್ದು ಕೆಟ್ಟೋರ್ದು" ಎಲ್ಲಾ ಓಟ್ನು ನಿಮಗೆ ಹಾಕಿಸ್ದೆ ಕನ್ ಸಾ.

ಎಂ.ಎಲ್.ಎ. : ಓ... ಈಗ ಜ್ಞಾಪಕಕ್ಕೆ ಬಂತು ಕೊತ್ತಿಬುಡ್ಡಯ್ಯ... ಏನು ಸಮಾಚಾರ?

ಕೊತ್ತಿಬುಡ್ಡ : ನೀವು ಎಂ.ಎಲ್.ಎ., ಆಗಿ ಗೆದ್ದು ಬಂದದ್ದು ನಮಗೆಲ್ಲಾ ಭಾಗ್ಯ ಬಂದಂಗಾಯ್ತು ಸಾ. ನಮ್ಮ ಹೆಂಡ್ತಿ ಮಕ್ಳಗಂತೂ ಕಣ್ಣು ಬಾಯಿ ಬಂದಂಗೆ ಆಯ್ತು ಸಾ.

ಎಂ.ಎಲ್.ಎ. : ಬಹಳ ಸಂತೋಷ.... ಬಹಳ ಸಂತೋಷ.... ಈಗ ಏನಾಗ್ಬೇಕಾಗಿತ್ತಯ್ಯ ನನ್ನಿಂದ?

ಕೊತ್ತಿಬುಡ್ಡ : (ಅತಿ ದೈನ್ಯತೆಯಿಂದ ಕೈ ಮುಗಿಯುತ್ತಾ)
ಏನೊ ಒಂದು ನೆಳ್ಳು ಅಂತ ಇರೋಕೆ ನಮಗೆಲ್ಲಾ ಒಂದೊಂದು ಸಣ್ಣಪುಟ್ಟ ಮನೆ ಕಟ್ಟಿಸ್ಕೊಡಿ ಸಾ. ನಮ್ಮದು ಅಂತ ಆಸೆಯಿಂದ ಉಳೂಕೆ ದರಖಾಸ್ತಿನಲ್ಲಿ ಒಂದಿಷ್ಟು ಭೂಮಿ, ಹಂಚಿಸ್ಕೊಡಿ ಸಾ.... ತಮ್ಮ ಹೆಸರು ಹೇಳ್ಕೊಂಡು ನಮ್ಮ ಮನೆ ದೀಪ ಉರಿಸ್ಕೋತೀವಿ.

ಎಂ.ಎಲ್.ಎ. : ನಾನು ಇದಕ್ಕೆಲ್ಲಾ ಈಗಾಗ್ಲೆ ಏರ್ಪಾಟು ಮಾಡಿದ್ದೀನಿ.... ಇನ್ನು ಮುಂದಕ್ಕೂ ಮಾಡ್ತೀನಿ. ನೀವು ಬಡವರು ಏನ್ ಕೇಳ್ಳಿ ಕೇಳ್ದೆ ಹೋಗ್ಲಿ, ನಿಮ್ಗೆ ಏನೇನು ಬೇಕೊ.... ಅದನ್ನೆಲ್ಲಾ ನಮ್ಮ ಸರ್ಕಾರ ನಿಮ್ಗೆ ಮಾಡಿ ಕೊಡುತ್ತೆ.... ಏನಾದ್ರು ಮಾಡಿ ನಿಮ್ಮಂಥ ಬಡ ಬಗ್ಗರನ್ನ ಮೇಲಕ್ಕೆತ್ತಬೇಕು ಅನ್ನೋದೆ ನನ್ನ ಆಸೆ.

ಕೊತ್ತಿಬುಡ್ಡ : ಎತ್ಬುಡಿ ಸಾ. ಹೆಂಗಾರ ಮಾಡಿ ನಮ್ಮನ್ನೆಲ್ಲಾ ಮ್ಯಾಲಕ್ಕೆತ್ತಿ ಸಾ.

ಎಂ.ಎಲ್.ಎ. : ನೋಡು ಕೊತ್ತಿಬುಡ್ಡಯ್ಯ, ನಾನೆಷ್ಟು ವರ್ಷ ಎಂ.ಎಲ್.ಎ. ಆಗಿರ್ತೀನಿ ಅನ್ನೋದು ನನಗೆ ಮುಖ್ಯವಲ್ಲ. ನನಗೆ ಸ್ವಾರ್ಥ ಅನ್ನೋದು ಕಿಂಚಿತ್ತಾದ್ರು ಇಲ್ಲ ಕಣಯ್ಯ. ನಿಮ್ಮಂಥ ಬಡವರ ಏಳಿಗೆಗಾಗಿ ಏನೇನು ಒಳ್ಳೆ ಕಾರ್ಯ ಮಾಡ್ದೆ ಅನ್ನೋದೆ ಮುಖ್ಯ. ನಿಮ್ಮಂಥ ಬಡವರ ಉದ್ಧಾರಕ್ಕಾಗಿ ನನ್ನ ಪ್ರಾಣನೆ ಕೊಡೋದಕ್ಕು ನಾನು ಸಿದ್ಧವಾಗಿದ್ದೀನಿ ಕಣಯ್ಯ.

ಕೊತ್ತಿಬುಡ್ಡ : ತಮ್ಮಂಥ ಲೀಡ್ರು ನಮಗೆ ಸಿಗಲಾಗಿ, ನಮ್ಮ ಜನ್ಮ ಪಾವನ ಆಯ್ತು ಕನ್ ಸಾ. ನಮ್ಮದೊಂದು ಕೋರ್ಕೆ ಸಾ.

ಎಂ.ಎಲ್.ಎ. : ಏನಯ್ಯ ಅದು?

ಕೊತ್ತಿಬುಡ್ಡ : ತಮಗೆ ಒಂದು ದೊಡ್ಡ ಸನ್ಮಾನ ಮಾಡ್ಬೇಕು ಅಂತ ನಮ್ಮ ಬಡಬಗ್ಗರೆಲ್ಲಾ ಭೋ ಆಸೆ ಇಟ್ಕೊಂಡವ್ರೆ ಸಾ.... ತಾವು ಖಂಡಿತ ಒಪ್ಕೊಳ್ಳಬೇಕು.

ಎಂ.ಎಲ್.ಎ. : ಅದೆಲ್ಲಾ ಏನು ಬೇಡ ಕೊತ್ತಿಬುಡ್ಡಯ್ಯ.

ಕೊತ್ತಿಬುಡ್ಡ : ಅಯ್ಯಯ್ಯೋ ಹಂಗನ್ಬೇಡಿ ಸಾ. ತಮ್ಮ ಪಾದದ ದೂಳು ನಮ್ಮಂಥ ಬಡವರ ಜೋಪಡಿಗಳ ಮ್ಯಾಲೆ ಬೀಳ್ಳೇಬೇಕು. ತಾವು ಖಂಡಿತ ಬರ್ಲೇಬೇಕು ಸಾ.

(ಅವನ ಸಂಗಡಿಗರು ಕೂಡ "ನೀವು ಬರ್ಲೇಬೇಕು ಸ್ವಾಮಿ" ಎಂದು ಒತ್ತಾಯಿಸುತ್ತಾರೆ.)

ಎಂ.ಎಲ್.ಎ. : ಏನೋ ನೀವೆಲ್ಲಾ ಇಷ್ಟೊಂದು ಅಭಿಮಾನದಿಂದ ಕರೀತಾ ಇದ್ದೀರಿ. ಆಗ್ಲಿ, ನಿಮ್ಮ ಆಸೆಯಂತೆ ನಾನು ಬರ್ತೀನಿ.

ಕೊತ್ತಿಬುಡ್ಡ : ಬಡವರ ಬಂಧುವಿಗೆ....

ಸಂಗಡಿಗರು : ಜಯವಾಗಲಿ.

ಕೊತ್ತಿಬುಡ್ಡ : ದೀನ ದಲಿತರ ನಾಯಕನಿಗೆ....

ಸಂಗಡಿಗರು : ಜಯವಾಗಲಿ.

ಕೊತ್ತಿಬುಡ್ಡ : ಕರ್ನಾಟಕದ ಅಂಬೇಡ್ಕರ್ ಅವರಿಗೆ....

ಸಂಗಡಿಗರು : ಜಯವಾಗಲಿ.

ಕೊತ್ತಿಬುಡ್ಡ : ಕರ್ನಾಟಕದ ಮಹಾತ್ಮ ಗಾಂಧೀಜಿ ಅವರಿಗೆ....

ಸಂಗಡಿಗರು : ಜಯವಾಗಲಿ.

(ಎಂ.ಎಲ್.ಎ., ಬಹಳ ಹೆಮ್ಮೆಯಿಂದ ಬೀಗುತ್ತಿರುತ್ತಾನೆ. ಬಡವರೆಲ್ಲರೂ ಅವನ ಸುತ್ತ ಅತಿ ಉತ್ಸಾಹದಿಂದ ಜೈಕಾರ ಹಾಕುತ್ತಿರುತ್ತಾರೆ. ಅಷ್ಟರಲ್ಲಿ ಹಿನ್ನೆಲೆಯಿಂದ ನಿಸಾರ್ ಅಹಮದ್ ಅವರು ರಚಿಸಿರುವ ಕವನದ ಸಾಲುಗಳು ಹಾಡಾಗಿ ಕೇಳಿಬರುತ್ತವೆ. ಆ ಹಾಡು ಪ್ರಾರಂಭವಾಗುತ್ತಿದ್ದಂತೆಯೇ, ಅವರೆಲ್ಲರೂ ತಾವಿದ್ದ ಭಂಗಿಗಳಲ್ಲೇ ಸ್ತಬ್ಧರಾಗಿ ನಿಲ್ಲುತ್ತಾರೆ.)

ಕುರಿಗಳು, ಸಾರ್, ಕುರಿಗಳು.
ಸಾಗಿದ್ದೇ ಗುರಿಗಳು.
ಮಂದೆಯಲ್ಲಿ ಒಂದಾಗಿ ಸ್ವಂತತೆಯೇ ಬಂದಾಗಿ

ಇದರ ಬಾಲ ಅದು ಮತ್ತೆ
ಅದರ ಬಾಲ ಇದು ಮೂಸಿ
ದನಿ ಕುಗ್ಗಿಸಿ ತಲೆ ತಗ್ಗಿಸಿ
ಹುಡುಕಿ ಹುಲ್ಲು ಕಡ್ಡಿ ಮೇವು
ಅಂಡಲೆಯುವ ನಾವು ನೀವು
ಕುರಿಗಳು, ಸಾರ್, ಕುರಿಗಳು.

(ಹಾಡು ಮುಗಿಯುತ್ತಿದ್ದಂತೆಯೇ ರಂಗದ ಮೇಲೆ ಕತ್ತಲು ಆವರಿಸುತ್ತದೆ. ಮತ್ತೆ ರಂಗದ ಮೇಲೆ ಬೆಳಕು ಬಂದಾಗ ವಿಶ್ವನಾಥ, ಬೋರೇಗೌಡ, ದೊಡ್ಡೈದ ಹಾಗೂ ಕೂಲಿಗಳು ಮೊದಲಿನಂತೆ ನಿಂತಿರುತ್ತಾರೆ.)

ವಿಶ್ವನಾಥ : ನಮ್ಮ ರಾಜಕಾರಣಿಗಳು ಹೇಗಿದ್ದಾರೆ ಅನ್ನೋದನ್ನ ನೋಡುದ್ರಾ.

ಬೋರೇಗೌಡ : ಅವರ ಕತೆ ಯಾಕೆ ಹೇಳ್ತಿರಿ ಬುಡಿ ಸ್ವಾಮಿ. ಒಂದು ಸತಿ ಎಂ.ಎಲ್.ಎ. ಇಲ್ಲವೇ ಮಂತ್ರಿಯೋ ಆಗ್ಬುಟ್ರೆ ಸಾಕು, ಅವರ ಹೆಂಡ್ತಿ ಮಕ್ಳು.... ಅಳಿಯಂದ್ರು.... ನೆಂಟರಿಷ್ಟರ ಹೆಸರಲ್ಲಿ ಬೇಕಾದಷ್ಟು ಆಸ್ತಿಪಾಸ್ತಿ ಮಾಡ್ಕೊಳ್ತರೆ.

ವಿಶ್ವನಾಥ : ನೋಡಿ ಬೋರೇಗೌಡ್ರೆ, ಆ ಇಂಜಿನಿಯರ್ ಅಂಥಾವನು.... ಈ ರಾಜಕಾರಣಿ ಇಂಥಾವನು ಅಂತ ಅವರಿವರನ್ನ ದೂಷಣೆ ಮಾಡೋದರ ಜೊತೆಗೆ, ನಾನು ಹೇಗೆ ಇದ್ದೀನಿ ಅನ್ನೋದನ್ನು ಸ್ವಲ್ಪ ಹೇಳ್ತೀನಿ ಕೇಳಿ.

ಬೋರೇಗೌಡ : ಹೇಳಿ ಸ್ವಾಮಿ.

ವಿಶ್ವನಾಥ : ನಿಮಗೆ ಗೊತ್ತಿರುವಂಗೆ ನಾನು ಇದೇ ಊರಿನ ಕಾಲೇಜ್ನಲ್ಲಿ ಲೆಕ್ಚರರ್ ಆಗಿದ್ದೀನಿ. ತಿಂಗಳೊಂದಕ್ಕೆ ಸಾವಿರದ ಏಳುನೂರು ರೂಪಾಯಿ ಸಂಬಳ ಬರುತ್ತೆ.

ಬೋರೇಗೌಡ : ಕಾಲೇಜು ಮೇಷ್ಟ್ರುಗಳ್ಗೆ ಒಂದು ತಿಂಗಳ್ಗೆ ಅಷ್ಟೊಂದು ಸಂಬಳ ಬಂದದಾ!

ವಿಶ್ವನಾಥ : ಬರುತ್ತೆ ಬೋರೇಗೌಡ್ರೆ. ಇಷ್ಟೊಂದು ಹಣವನ್ನು ಸರ್ಕಾರದಿಂದ ಕೈತುಂಬಾ ಪಡೆಯುವ ನಾನು, ಕಾಲೇಜಿನಲ್ಲಿ ಏನು ಕೆಲಸ ಮಾಡ್ಬೇಕು ಅನ್ನೊದನ್ನ ನೀವೇ ಹೇಳಿ.

ಬೋರೇಗೌಡ : ಇದೇನ್ ಸ್ವಾಮಿ ಹೀಗೆ ಕೇಳ್ತಿರಿ?

ವಿಶ್ವನಾಥ : ನೀವು ಹಿರಿಯೋರು, ನನಗಿಂತ ಹೆಚ್ಚಾಗಿ ಲೋಕಾನುಭವ ಉಳ್ಳೋರು. ಹೇಳಿ ನೀವೇನೆ, ನಾನೇನು ಮಾಡ್ಬೇಕು ಅಂತ?

ಬೋರೇಗೌಡ : ನಮ್ಮ ಹೈಕ್ಳನ್ನೆಲ್ಲಾ ನಿಮ್ಮ ಕಾಲೇಜ್ಗೆ ಕಳಿಸ್ತಿವಿ. ಅವರಿಗೆ ವಿದ್ಯಾ ಬುದ್ಧಿ ಕಲ್ಸಿ "ಇದು ಕೆಟ್ಟ ಮಾರ್ಗ ಕಣ್ರಪ್ಪ.... ಈ ದಾರೀಲಿ ನೀವು ಹೋಗ್ಬೇಡಿ. ಇದು ಒಳ್ಳೆ ಮಾರ್ಗ ಕಣ್ರಪ್ಪ... ಈ ದಾರೀಲಿ ನೀವು ಹೋಗಿ" ಅಂತ ಒಂದು ಒಳ್ಳೆ ನಡೆನುಡಿ ಕಲ್ಸಿ, ಅವರನ್ನ ಮನುಷ್ಯರನ್ನಾಗಿ ಮಾಡ್ಬೇಕು.

ವಿಶ್ವನಾಥ : ನೀವು ಹೇಳ್ದಂಗೆ ಮಾಡುವ ಬದಲು, ನಾನು.... ನನ್ನಂಥ ಕೆಲವರು ಮೇಷ್ಟ್ರುಗಳು ಕಾಲೇಜಿನಲ್ಲಿ ಏನು ಮಾಡ್ತಾ ಇದ್ದೀವಿ ಅನ್ನೋದನ್ನ ನೀವೆ ನೋಡಿ.

(ಎನ್ನುತ್ತಿದ್ದಂತೆಯೇ ರಂಗದ ಮೇಲೆ ಕತ್ತಲು ಕವಿಯುತ್ತದೆ. ವಿಶ್ವನಾಥನೊಬ್ಬನನ್ನು ಉಳಿದು, ಬೇರೆಯವರೆಲ್ಲರು ನೇಪಥ್ಯಕ್ಕೆ ಸರಿಯುತ್ತಾರೆ. ಮತ್ತೆ ಬೆಳಕು ವ್ಯಾಪಿಸಿದಾಗ ಕೊಠಡಿಯೊಂದರಲ್ಲಿ ವಿಶ್ವನಾಥ ಒಬ್ಬನೆ ಏನನ್ನೊ ಓದುತ್ತಾ ನಿಂತಿರುತ್ತಾನೆ. ಅಷ್ಟರಲ್ಲಿ ಅವನ ಬಳಿಗೆ ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ ಒಬ್ಬರು ತಮ್ಮ ಪುತ್ರನೊಡನೆ ಆಗಮಿಸುತ್ತಾರೆ. ಬಂದವರಿಬ್ಬರು ವಿಶ್ವನಾಥನಿಗೆ ನಮಸ್ಕರಿಸುತ್ತಾರೆ)
ನಮಸ್ಕಾರ.... ಬನ್ನಿ.

ಸಿ.ಟಿ.ಓ.ಪುತ್ರ : ಇವರು ನಮ್ಮ ತಂದೆಯವರು ಸಾರ್.
(ಎಂದು ತನ್ನ ತಂದೆಯನ್ನು ವಿಶ್ವನಾಥನಿಗೆ ಪರಿಚಯ ಮಾಡಿ ಕೊಡುತ್ತಾನೆ. ಸಿ.ಟಿ.ಓ. ಅವರು ವಿಶ್ವನಾಥನ ಕೈ ಕುಲುಕುತ್ತಾ)

ಸಿ.ಟಿ.ಓ. : ನಿಮ್ಮನ್ನು ಭೇಟಿ ಮಾಡುವಂತಹ ಅವಕಾಶ ಸಿಕ್ಕಿದ್ದಕ್ಕೆ ಬಹಳ ಸಂತೋಷವಾಯ್ತು ಸಾರ್.

ವಿಶ್ವನಾಥ : ಬನ್ನಿ ಕುಂತ್ಕೊಳಿ.

ಸಿ.ಟಿ.ಓ. : ಪರವಾಗಿಲ್ಲ ಬಿಡಿ ಸಾರ್.... ನಾನು ಇಲ್ಲೆ ಸಿ.ಟಿ.ಓ. ಆಗಿದ್ದೀನಿ. ನನ್ನ ಹೆಸರು ರಮೇಶ್ ಅಂತ.

ವಿಶ್ವನಾಥ : ನಿಮ್ಮ ಹೆಸರು ಕೇಳಿದ್ದೀನಿ, ಆದ್ರೆ ನಿಮ್ಮನ್ನ ಮುಖತಃ ಭೇಟಿ ಮಾಡಿರಲಿಲ್ಲ. ಏನ್ ರಮೇಶ್ ಅವರೆ ಇಷ್ಟು ದೂರ?

ರಮೇಶ್ : ತಮ್ಮನ್ನೆ ನೋಡೋಣ ಅಂತ ಬಂದೆ ಸಾರ್.

ವಿಶ್ವನಾಥ : ಏನು ವಿಶೇಷ?

ರಮೇಶ್ : ಏನಿಲ್ಲ ಸಾರ್, ನನಗೆ ಇವನೊಬ್ಬನೆ ಮಗ. ಏನಾದ್ರು ಮಾಡಿ ಇವನನ್ನ ಇಂಜಿನಿಯರ್ ಮಾಡ್ಬೇಕು ಅಂತ ಬಹಳ ಆಸೆಯಿದೆ.

ವಿಶ್ವನಾಥ : ಮಾಡಿ ಸಾರ್. ಅದಕ್ಕೇನು ತೊಂದರೆ? ಈಗೇನು ಕರ್ನಾಟಕದಲ್ಲಿ ಬೇಕಾದಷ್ಟು ಇಂಜಿನಿಯರಿಂಗ್ ಕಾಲೇಜುಗಳಿವೆ. ಒಂದಷ್ಟು ಡೊನೇಷನ್ ಕಟ್ಟುದ್ರೆ ಸೀಟು ಸಿಗುತ್ತೆ.

ರಮೇಶ್ : ಡೊನೇಷನ್ ಏನ್ ಸಾರ್, ಎಷ್ಟು ಬೇಕಾದರೂ ಬಿಸಾಕ್ತೀನಿ. ಈಗ ಅದಲ್ಲ ಸಾರ್ ನನಗೆ ತೊಂದ್ರೆ ಆಗಿರೋದು?

ವಿಶ್ವನಾಥ : ಮತ್ತಿನ್ನೇನು?

ರಮೇಶ್ : ಡೊನೇಷನ್ ಕಟ್ಟಿ ಸೀಟು ಪಡಿಬೇಕಾದ್ರೆ ಫಿಸಿಕ್ಸ್, ಕೆಮಿಷ್ಟ್ರಿ, ಮ್ಯಾಥ್‌ಮ್ಯಾಟಿಕ್ಸ್ ವಿಷಯಗಳಲ್ಲಿ ಮಿನಿಮಮ್ ನಲವತ್ತೈದು ಪರ್ಸೆಂಟ್ ಮಾರ್ಕ್ಸ್ ಬಂದಿರ್ಲೇಬೇಕು ಅಂತ ನಿಯಮ ಮಾಡಿದ್ದಾರೆ. ಈಗ ಅದೇ ಬಹಳ ಕಷ್ಟ ಆಗಿದೆ ಸಾರ್.

ವಿಶ್ವನಾಥ : (ವಿದ್ಯಾರ್ಥಿಯ ಕಡೆಗೆ ತಿರುಗಿ)
ಏನಯ್ಯಾ, ನಲವತ್ತೈದು ಪರ್ಸೆಂಟ್ ಸ್ಕೋರ್ ಮಾಡೋಕೆ ಆಗಲ್ವೇನಯ್ಯ?

ವಿದ್ಯಾರ್ಥಿ : (ಮೈಯನ್ನೆಲ್ಲಾ ನುಲಿಯುತ್ತಾ, ತಲೆ ಕೆರೆದುಕೊಳ್ಳುತ್ತಾ)
ಆಗೊಲ್ಲ ಸಾರ್.

ರಮೇಶ್ : ಇವನ್ಗೆ ಸೈನ್ಸ್ ಸಬ್ಜೆಕ್ಟ್ಸ್ ಅಂದ್ರೆ ಸ್ವಲ್ಪನೂ ತಲೆಗೆ ಹೋಗೊಲ್ಲ ಸಾರ್. ನಾನೇ ಪರೀಕ್ಷೆ ಟೈಮ್ನಲ್ಲಿ ತಮ್ಮಂಥ ದೊಡ್ಡೋರ್ನ ಹಿಡ್ಕೊಂಡು ಇದುವರೆಗೆ ಹಾಗೂ ಹೀಗೂ ಸ್ವಲ್ಪ ಮ್ಯಾನೇಜ್ ಮಾಡ್ಕೊಂಡು ಬಂದಿದ್ದೀನಿ...

(ಸ್ವಲ್ಪ ಮೆದು ಧ್ವನಿಯಲ್ಲಿ)

ಸಾರ್, ಈ ಸಾರಿ ಪರೀಕ್ಷೆ ಸಮಯದಲ್ಲಿ ಸ್ವಲ್ಪ ಈತನಿಗೆ ಸಹಾಯ ಮಾಡುದ್ರೆ.... ಹೇಗೋ ನಲವತ್ತೈದು ಪರ್ಸೆಂಟ್ ಬರುವ ರೀತಿ ಅನುಕೂಲ ಮಾಡಿಕೊಟ್ರೆ, ಬಹಳ ಉಪಕಾರ ಮಾಡಿದ ಹಾಗಾಗುತ್ತದೆ.

ವಿಶ್ವನಾಥ : ನೀವೇನು ಹೇಳ್ತಾ ಇದ್ದೀರಿ?

ರಮೇಶ್ : ಹೀಗೆ ಹೇಳ್ತಾ ಇದ್ದೀನಿ ಅಂತ ತಾವೇನು ಬೇಸರ ಪಟ್ಕೊಳ್ಬೇಡಿ. ನಮ್ಮ ಹುಡುಗ ನಿಮ್ಮ ವಿಚಾರ ಎಲ್ಲಾ ಹೇಳಿದ್ದಾನೆ. ನೀವು ಬಹಳ ಒಳ್ಳೆಯವರಂತೆ. ವಿದ್ಯಾರ್ಥಿಗಳಿಗೆ ಪರೀಕ್ಷೆ ಟೈಮ್ನಲ್ಲಿ ಬಹಳ ಲಿಬರಲ್ ಆಗಿದ್ಕೊಂಡು ಹೆಲ್ಪ್ ಮಾಡ್ತೀರಂತೆ. ಎಷ್ಟೋ ವಿದ್ಯಾರ್ಥಿಗಳು ತಮ್ಮಿಂದ್ಲೆ ಫಸ್ಟ್ ಕ್ಲಾಸ್ ಪಡೆದು ಈಗ ಒಳ್ಳೊಳ್ಳೆ ಸ್ಥಾನಮಾನಗಳಿಗೆ ಹೋಗಿದ್ದಾರಂತೆ.

ವಿಶ್ವನಾಥ : ನೋಡಿ ರಮೇಶ್, ನೀವು ಹೇಳೋದೆಲ್ಲಾ ನಿಜ. ನಾನು ಪರೀಕ್ಷೆ ಹಾಲ್‌ನಲ್ಲಿ ವಿದ್ಯಾರ್ಥಿಗಳಿಗೆ ಸಹಾಯ ಮಾಡಿದ್ದೇನೆ. ಎಷ್ಟೋ ಸಾರಿ "ಫಿಲ್‌ಅಪ್ ದಿ ಬ್ಲಾಂಕ್" ಪ್ರಶ್ನೆಗಳಿಗೆ ಭರ್ತಿ ಮಾಡಿ ಚೀಟಿ ಕಳಿಸಿದ್ದೇನೆ. ಕಠಿಣವಾದ ಪ್ರಾಬ್ಲಮ್ಸ್ ನ ಸಾಲ್ವ್ ಮಾಡಿ ಕಾರ್ಬನ್ ಹಾಕಿ ಅನೇಕ ಪ್ರತಿಗಳನ್ನು ತೆಗೆದು ಸಪ್ಲೈ ಮಾಡಿದ್ದೇನೆ. ಕೆಲವೊಮ್ಮೆ ಖುದ್ದಾಗಿ ನಾನೇ ಉತ್ತರಗಳನ್ನು ಬರೆಸಿದ್ದೇನೆ. ಆದ್ರೆ ಇದನ್ನೆಲ್ಲಾ ನನ್ನ ಸ್ವಾರ್ಥಕ್ಕೋಸ್ಕರ ಮಾಡ್ತಾಯಿಲ್ಲ. ಏನೊ ನಮ್ಮ ವಿದ್ಯಾರ್ಥಿಗಳಿಗೆ ನನ್ನ ಕೈಲಾದ ಸೇವೆ ಅಂತ ಮಾಡ್ತಾ ಇದ್ದೀನಿ...ಆದ್ರೆ ಇದನ್ನೂ ಆಡ್ಕೊಳುವಂತಹ ವ್ಯಕ್ತಿಗಳು ಇದ್ದಾರಲ್ಲ, ಅದಕ್ಕೇನು ಹೇಳ್ತೀರಿ ನೀವು?

ರಮೇಶ್ : ಸಂಸ್ಕೃತಿ ಇಲ್ಲದ ಜನ ಸಾರ್ ಅವರು.... ಅಂಥಾವ್ರ ಮಾತುಗಳನ್ನ ನಾವು ಮನಸ್ಸಿಗೆ ಹಾಕ್ಕೊಳ್ಳೆಬಾರ್ದು.

ವಿಶ್ವನಾಥ : ನಾನು ಅಂಥಾವರನ್ನೆಲ್ಲಾ ಲೆಕ್ಕಕ್ಕೆ ಇಡೊಲ್ಲ ಬಿಡಿ.... ನೀವೆ ಹೇಳಿ ಸಾರ್? ಇವತ್ತು ನಮ್ಮ ದೇಶದ ಯಾವ ಯೂನಿವರ್ಸಿಟಿನಲ್ಲಿ ಕಾಪಿ ನಡೀತಾಯಿಲ್ಲ? ನಾನೇನು ಇದನ್ನು ಇಲ್ಲಿ ಹೊಸದಾಗಿ ಮಾಡಿಸ್ತಾ ಇದ್ದೀನ! ಅದೂ ಅಲ್ಲದೆ ನಾನು ಎಲ್ಲಾ ವಿದ್ಯಾರ್ಥಿಗಳಿಗೂ ಈ ರೀತಿ ಸಹಾಯ ಮಾಡೊಲ್ಲ. ನನ್ನ ಮಾತು ಕೇಳುವಂಥ ನಮ್ಮ ಜಾತಿ ಹುಡುಗರಿಗೆ ಮಾತ್ರ.

ರಮೇಶ್ : ನಾನು ತಮ್ಮ ಜಾತೀನೆ ಸಾರ್.

ವಿಶ್ವನಾಥ್ : ಗೊತ್ತು.... ನಿಮ್ಮ ಹುಡುಗ ಎಲ್ಲಾ ಹೇಳಿದ್ದಾನೆ. ನೀವು ನಮ್ಮ ಜಾತಿಯವರು ಅಂತ್ಲೆ ನಾನಿಷ್ಟು ಓಪನ್ ಹಾರ್ಟ್‌ನಿಂದ ಮಾತಾಡ್ತಾ ಇರೋದು. ಬೇರೆ ಜಾತಿಯವರ ಮುಂದೆ ಹಾಗೆಲ್ಲಾ ಹಾರ್ಟ್ ಬಿಚ್ಚು ಮನುಷ್ಯ ಅಲ್ಲ ನಾನು....

(ಕ್ಷಣ ಕಾಲ ಏನನ್ನೊ ಯೋಚಿಸಿ)

ನೋಡಿ ಸಾರ್, ಡೊನೇಷನ್ ಅಂತ ಮುಂದಕ್ಕೆ ಹದಿನೈದು ಇಪ್ಪತ್ತು ಸಾವಿರ ಸುರಿಯೋ ಬದಲು, ಈಗ್ಲೆ ಸ್ವಲ್ಪ ಖರ್ಚು ಮಾಡುದ್ರೆ ಒಳ್ಳೆ ನಂಬರ್ ಬರುತ್ತೆ.

ರಮೇಶ್ : ಏನೊ ಸಾರ್, ಎಲ್ಲಾ ತಮಗೆ ಸೇರಿದ್ದೆ. ತಾವು ಹೇಗೆ ಹೇಳ್ತೀರಿ, ಆ ರೀತಿ ಮಾಡ್ತೀನಿ.

ವಿಶ್ವನಾಥ : ಇಲ್ಲಿ ಪರೀಕ್ಷೆ ನಡೆಯುವಾಗ ನಾನೇ ಇರ್ತೀನಿ....

(ಹುಡುಗನನ್ನು ಕುರಿತು)
ಮುಂದಿನ ಸೋಮವಾರದಿಂದ ಅಲ್ವೇನಯ್ಯ ನಿಮ್ಮ ಪರೀಕ್ಷೆ?

ವಿದ್ಯಾರ್ಥಿ : ಹೌದು ಸಾರ್.

ವಿಶ್ವನಾಥ : ಪರೀಕ್ಷೆಗಳ ದಿನ, ಅದರಲ್ಲೂ ಪಿ.ಸಿ.ಎಂ.ಗೆ ನಾನೆ ಇನ್‌ವಿಜಿಲೇಟರ್ ಆಗಿ ಬರ್ತೀನಿ. ನೀನೇನೂ ಹೆದರ್ಕೊಳ್ಬೇಡ. ಧೈರ್ಯವಾಗಿ ಪರೀಕ್ಷೆಗೆ ಬಾ. ಎಲ್ಲಾ ಸಿದ್ಧತೆ ಮಾಡ್ಕೊಂಡು ಬಾ.

ವಿದ್ಯಾರ್ಥಿ : ಆಗ್ಲಿ ಸಾರ್.... ಇಂಗ್ಲಿಷಿಗೂ ನೀವೆ ಬಂದಿದ್ರೆ ಚೆನ್ನಾಗಿರ್ತಿತ್ತು ಸಾರ್.

ವಿಶ್ವನಾಥ : ಇಂಗ್ಲಿಷ್ ಕಷ್ಟವೇನಯ್ಯಾ?

ರಮೇಶ್ : ಒಂದು ಸಾರಿ ಕನ್ನಡದಲ್ಲೂ ಇನ್ನೇನು ಫೆಯಿಲ್ ಆಗಿ ಬಿಡ್ತಿದ್ದ ಸಾರ್.

ವಿಶ್ವನಾಥ : ಹೌದೇನು, ಹೋಗ್ಲಿ ಬಿಡಿ. ಎಲ್ಲಾ ಸಬ್ಜೆಕ್ಟ್ ಗಳಿಗೂ ನಾನೆ ಹೋಗ್ತೀನಿ.

ರಮೇಶ್ : ತುಂಬಾ ಥ್ಯಾಂಕ್ಸ್ ಸಾರ್.... ತುಂಬಾ ಥ್ಯಾಂಕ್ಸ್.

ವಿಶ್ವನಾಥ : ಇಲ್ಲೀದು ಬಿಡಿ, ಇಲ್ಲೇನು ದುಡ್ಡು ಖರ್ಚಾಗೊಲ್ಲ. ಆದ್ರೆ ಅಲ್ಲಿ ಸ್ವಲ್ಪ ಖರ್ಚಾಗುತ್ತೆ. 'ಅಲ್ಲಿ' ಅಂದರೆ ಪೇಪರ್ ವ್ಯಾಲ್ಯು ಮಾಡೊ ಸೆಂಟರ್‌ಗಳಲ್ಲಿ. ಪೇಪರ್‌ಗಳನ್ನ ನಮಗೆ ಬೇಕಾದವರ ಕೈಗೆ ಸಿಗುವಂತೆ ಹಾಕಿಸ್ಕೊಳ್ಬೇಕು. ಒಂದು ವೇಳೆ ಅದೇನಾದ್ರೂ ಕೆಲವು ಕೋಡಂಗಿಗಳ ಹತ್ರ ಹೊರಟೋದ್ರೆ, ಅವರು ನಮ್ಮನ್ನು ಹತ್ತಿರಕ್ಕೂ ಸೇರ್ಸಲ್ಲ. ಹಾಳಾದೋರು ಸ್ಟ್ರಿಕ್ಟ್.... ಸ್ಟ್ರಿಕ್ಟ್ ಅನ್ಕೊಂಡು ನಮ್ಮ ವಿದ್ಯಾರ್ಥಿ ಜನಾಂಗವನ್ನೆ ಹಾಳು ಮಾಡ್ತಾವ್ರೆ. ಆದ್ದರಿಂದ ಮೊದಲೇ ಎಚ್ಚರಿಕೆ ವಹಿಸಿ ನಮಗೆ ಬೇಕಾದವರಿಗೆ ನೋಡಿ ಹಾಕಿಸ್ಕೊಳ್ಬೇಕು. ಆಮೇಲೆ ಪೇಪರ್ ವ್ಯಾಲು ಮಾಡುವವರ ಕೈ ಬೆಚ್ಚಗೆ ಮಾಡ್ಬೇಕು. ಇನ್ನು ಸ್ವಲ್ಪ ಸಣ್ಣ ಪುಟ್ಟ ಬಾಬ್ತುಗಳಿವೆ. ಅದಕ್ಕೆಲ್ಲಾ ಸ್ವಲ್ಪ ಖರ್ಚಾಗುತ್ತೆ.

ರಮೇಶ್ : ಆಗ್ಲಿ ಎಷ್ಟಾದ್ರು ಚಿಂತೆ ಇಲ್ಲ. ನೀವೇನೂ ಹಿಂಜರಿಯಬೇಡಿ. ನೂರು ಖರ್ಚು ಮಾಡೊ ಕಡೆ, ಸಾವಿರ ಖರ್ಚು ಮಾಡಿ, ನಾನು ಬೇಡ ಅನ್ನೊಲ್ಲ. ಒಟ್ಟಿನಲ್ಲಿ ನನ್ನ ಮಗನಿಗೆ ನಲವತ್ತೈದು ಪರ್ಸೆಂಟ್ ಬಂದ್ರೆ ಸಾಕು.

ವಿಶ್ವನಾಥ್ : ಏನ್ ಸಾರ್, ಇನ್ನು ನಲವತ್ತೈದು ಪರ್ಸಂಟ್‌ನಲ್ಲೆ ಇದ್ದೀರಲ್ಲ. ನಿಮ್ಮ ಹುಡುಗನಿಗೆ ಎಂಬತ್ತೈದು ಪರ್ಸೆಂಟ್ ಮೇಲೆ ಬರ್ದೇ ಹೋದ್ರೆ, ನನ್ನ ಕುರೊ ಕುರೋ ಅಂತ ಕರೀರಿ. ನನ್ನ ಮಾತು ಅಲ್ಲಿ ಚೆನ್ನಾಗಿ ನಡೆಯುತ್ತೆ ಸಾರ್. ನನಗೆ ಬೇಕಾದವರು ಅಲ್ಲಿ ಬಹಳ ಮಂದಿ ಇದ್ದಾರೆ. ನೋಡಿ... ಕಳೆದ ಮಾರ್ಚ್‌ನಲ್ಲಿ ಒಟ್ಟು ಐದು ಕೇಸ್‌ಗೆ ನಾನು ಕೈ ಹಾಕಿದ್ದೆ. ಈಗ ಅವರಲ್ಲಿ ಮೂರು ಮಂದಿ ಮೆಡಿಕಲ್ ಸೇರಿದ್ದಾರೆ. ಇನ್ನಿಬ್ಬರು ಇಂಜಿನಿಯರಿಂಗ್ ಓದ್ತಾ ಇದ್ದಾರೆ. ಎಲ್ಲಾ ಫಸ್ಟ್ ಲಿಸ್ಟ್ ನಲ್ಲೆ ಸೆಲೆಕ್ಟ್ ಆದ್ರು.

ರಮೇಶ್ : ಏನೊ ನಮ್ಮ ಜಾತಿಯಲ್ಲಿ ತಮ್ಮಂಥವರು ಕೆಲವರಾದ್ರು ಇರೋದರಿಂದ, ನಮ್ಮ ಜನಾಂಗಕ್ಕೆ ಬಹಳ ಉಪಕಾರ ಆಗ್ತಾಯಿದೆ. ಅದೆ ಬಹಳ ಸಂತೋಷದ ಸಂಗತಿ ಸಾರ್...

(ತನ್ನ ಜೇಬಿನಿಂದ ಚೆಕ್‌ಬುಕ್ ಅನ್ನು ಹೊರತೆಗೆದು)

ಎಷ್ಟು ಹಣ ಅಗತ್ಯವಿದೆ ಅನ್ನೋದನ್ನ ತಾವು ಹೇಳುದ್ರೆ, ಅಷ್ಟಕ್ಕೆ ಈಗ್ಲೆ ಚೆಕ್ ಬರೆದುಕೊಡ್ತೀನಿ ಸಾರ್.

ವಿಶ್ವನಾಥ : ಓಹೋ.... ಚೆಕ್ ತಂದೆ ಬಿಟ್ಟಿದ್ದೀರಾ?

ರಮೇಶ್ : ಹೌದು ಸಾರ್. ನೀವೇನು ಸಂಕೋಚ ಪಟ್ಕೊಳ್ಬೇಡಿ ಎಷ್ಟಕ್ಕೆ ಬರೀಲಿ ಹೇಳಿ?

ವಿಶ್ವನಾಥ : ಈಗ ಐದು ಸಾವಿರಕ್ಕೆ ಬರೀರಿ. ಮುಂದಕ್ಕೆ ಒಂದು ವೇಳೆ ಬೇಕಾದ್ರೆ ಮತ್ತೆ ಕೇಳ್ತೀನಿ. ಯಾವ ಯಾವ ಕಡೆ ಎಷ್ಟೆಷ್ಟು ಕೊಟ್ಟೆ ಅನ್ನೋದಕ್ಕೆ.. ನಿಮಗೆ ಅನಂತರ ಕರೆಕ್ಟಾಗಿ ಲೆಕ್ಕ ಕೊಡ್ತೀನಿ. ಇಂತಹ ವಿಷಯಗಳಲ್ಲಿ ನಾನು ತುಂಬಾ ಪ್ರಾಮಾಣಿಕ.

ರಮೇಶ್ : ನನಗೆ ಗೊತ್ತಿದೆ ಸಾರ್. ತಮ್ಮಂಥ ಜಂಟಲ್ ಮೆನ್ಸ್ ಸಿಗೋದೆ ಅಪರೂಪ.
(ಎಂದು ಹೇಳಿ ಚೆಕ್ ಬರೆಯಲು ತೊಡಗುತ್ತಾನೆ)

ವಿಶ್ವನಾಥ : ಸಾರ್, ಚೆಕ್ ಅನ್ನು ನನ್ನ ಹೆಸರಿಗೆ ಬರಿಬೇಡಿ. ಸೆಲ್ಫ್ ಚೆಕ್ ಹಾಕೊಂಡು ಬಿಡಿ.

ರಮೇಶ್ : ಆಗ್ಲಿ ಸಾರ್, ತಾವು ಹೇಳಿದ ಹಾಗೆ ಬರಿತೀನಿ.

(ಬರೆಯುತ್ತಿರುತ್ತಾನೆ)

ವಿಶ್ವನಾಥ : (ವಿದ್ಯಾರ್ಥಿಯ ಭುಜವನ್ನು ಮೆಲ್ಲನೆ ತಟ್ಟುತ್ತಾ)
ನೋಡ್ದೇನಯ್ಯ, ನಿನ್ನ ಇಂಜಿನಿಯರ್ ಮಾಡೋಕೆ ನಿಮ್ಮ ತಂದೆಯವರು ಎಷ್ಟೊಂದು ಕಷ್ಟ ಪಡ್ತಾ ಇದ್ದಾರೆ. ಇದನ್ನು ಅರ್ಥ ಮಾಡ್ಕೊ. ನೀನು ಇಂಜಿನಿಯರ್ ಆದ್ಮೇಲೆ ನಿಮ್ಮ ತಂದೆಯವರ ಹಾಗೇನೆ ನಮ್ಮ ಸಮಾಜದಲ್ಲಿ ದೊಡ್ಡ ಸ್ಥಾನ ಪಡೀಬೇಕು.

ವಿದ್ಯಾರ್ಥಿ : (ಆಗಲಿ ಎಂಬಂತೆ ಮೌನದಿಂದ ತಲೆ ಅಲ್ಲಾಡಿಸುತ್ತಾನೆ.)

ರಮೇಶ್ : (ಚೆಕ್ ಅನ್ನು ನೀಡುತ್ತಾ)
ದಯವಿಟ್ಟು ಸ್ವೀಕರಿಸಬೇಕು ಸಾರ್. ತಮ್ಮ ಉಪಕಾರ ಖಂಡಿತ ಮರಿಯೊಲ್ಲ ಸಾರ್.

ವಿಶ್ವನಾಥ : ಇದ್ಯಾವ ಮಹಾ ಉಪಕಾರ ಅಂತ ಹೀಗೆ ಹೇಳ್ತಾ ಇದ್ದೀರಿ. ನಿಮ್ಮಂಥ ದೊಡ್ಡೋರು ಬಂದು ಕೇಳೋದು ಹೆಚ್ಚೋ... ನಾನು ಮಾಡ್ಕೊಡೋದು ಹೆಚ್ಚೋ...

(ಎಂದು ದೇಶಾವರಿ ನಗೆ ಬೀರುತ್ತಾ ಸಿ.ಟಿ.ಓ. ನಿಂದ ಚೆಕ್ ಅನ್ನು ಪಡೆಯುತ್ತಿದ್ದಂತೆಯೇ ಹಿನ್ನೆಲೆಯಿಂದ ಹಾಡೊಂದು ಕೇಳಿ ಬರುತ್ತದೆ. ಆ ತಕ್ಷಣವೇ ಅವರು ಇರುವ ಸ್ಥಿತಿಯಲ್ಲಿಯೇ ಸ್ತಬ್ಧರಾಗಿ ನಿಲ್ಲುತ್ತಾರೆ.

ಗುರುಬ್ರಹ್ಮಾ ಗುರುರ್ವಿಷ್ಣುರ್ಗುರುದೇವೋ ಮಹೇಶ್ವರಃ
ಗುರುದೇವ ಪರಂಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ

ಹಾಡು ಮುಗಿಯುತ್ತಿದ್ದಂತೆಯೇ ರಂಗದ ಮೇಲೆ ಕತ್ತಲು ಆವರಿಸುತ್ತದೆ. ಮತ್ತೆ ಬೆಳಕು ಮೂಡಿದಾಗ ವಿಶ್ವನಾಥ, ಬೋರೇಗೌಡ, ದೊಡ್ಡೈದ ಕೂಲಿಗಳು ರಂಗದ ಮೇಲಿರುತ್ತಾರೆ.)

ಬೋರೇಗೌಡ : ಏನ್ ಸ್ವಾಮಿ, ಮೇಷ್ಟ್ರುಗಳು ನೀವು ಇಂಥಾ ಕೆಲ್ಸನೆಲ್ಲಾ ಮಾಡ್ತೀರಾ?

ವಿಶ್ವನಾಥ : ಇದ್ಯಾವ ಮಹಾ ಕೆಟ್ಟ ಕೆಲ್ಸ?.... ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಹಾಲಿನಂಥ ಮನಸ್ಸನ್ನು ಹೇಗೆ ವಿಷ ಮಾಡ್ತಾ ಇದ್ದೀವಿ ಅನ್ನೋದನ್ನ ಇಲ್ಲಿ ಹೇಳುದ್ರೆ.... ನಮ್ಮ ಬಗ್ಗೆ ಇನ್ನೂ ಬೇಸರಪಟ್ಟುಕೊಳ್ತೀರಿ.

ಬೋರೇಗೌಡ : ಏನೋ ಸ್ವಾಮಿ, ದೇಶವೇ ಹಾಳಾಗ್ಹೋಯ್ತು. ಕೆಟ್ಟ ಕೆಲಸ ಮಾಡ್ಬಾರ್ದು ಅನ್ನೊ ಭಯ ಭೀತಿನೆ ಯಾರ್ಗು ಇಲ್ದೆ ಹೋಯ್ತು.

ವಿಶ್ವನಾಥ : ಆರೋಗ್ಯ ಸರಿಯಿಲ್ಲ ಅಂತ ನೀವು ಯಾವತ್ತಾದ್ರು ಸರ್ಕಾರಿ ಆಸ್ಪತ್ರೆಗೆ ಹೋಗಿದ್ರಾ?

ಬೋರೇಗೌಡ : ಒಳ್ಳೆ ಕಲ್ಲು ಗುಂಡು ಇದ್ದಂಗಿವ್ನಿ. ನಾನು ಯಾವತ್ತು ಕಾಯ್ಲೆ ಕಸಾಲೆ ಅಂತ ಮಲಗ್ದೋನೆ ಅಲ್ಲ. ಯಾಕ್ ಸ್ವಾಮಿ, ಆಸ್ಪತ್ರೆ ಸುದ್ದಿ ಎತ್ತುದ್ರಲ್ಲ.

ವಿಶ್ವನಾಥ : ಅಲ್ಲಿ ನಡೆದ ಒಂದು ಪ್ರಸಂಗವನ್ನ ನಿಮಗೆ ಹೇಳೋಣ ಅಂತ.

ಬೋರೇಗೌಡ : ಅದೇನು ಹೇಳಿ?

ವಿಶ್ವನಾಥ : ನೋಡಿ ಬೋರೇಗೌಡ್ರೆ..
(ಎನ್ನುತ್ತಿದ್ದಂತೆಯೇ ರಂಗದ ಮೇಲೆ ಕತ್ತಲು ಆವರಿಸುತ್ತದೆ. ಅಲ್ಲಿದ್ದವರೆಲ್ಲರೂ ನೇಪಥ್ಯಕ್ಕೆ ಸರಿಯುತ್ತಾರೆ. ಮತ್ತೆ ಬೆಳಕು ವ್ಯಾಪಿಸಿದಾಗ ಸರ್ಕಾರಿ ಆಸ್ಪತ್ರೆಯ

ಹೊರ ರೋಗಿಗಳ ಪರೀಕ್ಷಾ ಕೊಠಡಿಯಲ್ಲಿ ವೈದ್ಯರೊಬ್ಬರು ಒಂದು ಎಕ್ಸ್-ರೇ ಪ್ರತಿಯನ್ನು ಪರಿಶೀಲಿಸುತ್ತಿದ್ದಾರೆ. ಅಷ್ಟರಲ್ಲಿ ಅವರ ಬಳಿಗೆ ಓಣಿನಿಂಗನೆಂಬ ಒಬ್ಬ ಕೂಲಿಯವನು ತನ್ನ ಎಂಟು ವರ್ಷದ ಮಗನನ್ನು ಎತ್ತಿಕೊಂಡು ಬರುತ್ತಾನೆ.)

ಓಣಿ ನಿಂಗ : ಡಾಕ್ರ್ರು... ಡಾಕ್ರ್ರು... ನನ್ನ ಮಗನ್ನ ಉಳಿಸ್ಕೊಡಿ ಸ್ವಾಮಿ... ನನ್ನ ಮಗನ್ನ ಉಳಿಸ್ಕೊಡಿ.

ಡಾಕ್ಟರ್ : ಏನಾಗಿದೆ ನಿನ್ನ ಮಗನಿಗೆ?

ಓಣಿ ನಿಂಗ : ಮರದ ಮ್ಯಾಲಿನಿಂದ ಬಿದ್ದುಬಿಟ್ಟು, ನೆಲದ ಮ್ಯಾಲೆ ಕಾಲ ಊರೂಕೆ ಆಗೊಲ್ತು ಅನ್ತನೆ ಸ್ವಾಮಿ.

ಡಾಕ್ಟರ್ : ಈ ಟೇಬಲ್ ಮೇಲೆ ಮಲಗಿಸಯ್ಯ.
(ಓಣಿ ನಿಂಗ ತನ್ನ ಮಗನನ್ನು ಅಲ್ಲಿದ್ದ ಉದ್ದನೆಯ ಟೇಬಲ್ ಮೇಲೆ ಮಲಗಿಸುತ್ತಾನೆ. ಡಾಕ್ಟರ್ ಆ ಬಾಲಕನನ್ನು ಪರೀಕ್ಷಿಸುತ್ತಾ)

ಯಾವಾಗ ಬಿದ್ದ?

ಓಣಿ ನಿಂಗ : ಹೊತಾರೆ ಕಣ್ ಸ್ವಾಮಿ. ಹೈಕ್ಳ ಜೊತೆ ಅಕ್ಲಾಟ ಆಡ್ಕೊಂಡು, ಹಿಂಗೆ ಮಾಡ್ಕೊಂಡ.

ಡಾಕ್ಟರ್ : (ಆ ಬಾಲಕನನ್ನು ಚೆನ್ನಾಗಿ ಪರಿಶೀಲಿಸಿದ ನಂತರ)

ನೋಡಯ್ಯ.... ಜೀವಕ್ಕೇನು ಅಪಾಯವಿಲ್ಲ. ಆದ್ರೆ ಬಲಗಾಲಿನ ಮೂಳೆ ಮುರಿದಿದೆ. ಎಕ್ಸ್-ರೇ ತೆಗೆಸಿ ನೋಡುದ್ರೆ ಎಷ್ಟು ಮುರಿದಿದೆ ಅನ್ನೋದು ಸರಿಯಾಗಿ ಗೊತ್ತಾಗುತ್ತೆ.

ಓಣಿನಿಂಗ : ಅಯ್ಯಯ್ಯೋ.... ಮೂಳೇನೆ ಮುರ್ದೋಗದೆ ಅಂತೀರಾ ಸ್ವಾಮಿ.
(ಎಂದು ಅಳಲು ಪ್ರಾರಂಭಿಸುತ್ತಾನೆ.)

ಡಾಕ್ಟರ್ : ಹೌದು ಕಣಯ್ಯ. ಏನ್ ತಮಾಷೆಗೆ ಹೇಳ್ತ ಇದ್ದೀನಿ ಅಂತ ತಿಳ್ಕೊಂಡ? ಈ ತಕ್ಷಣನೆ ಹುಡುಗನನ್ನು ಮೈಸೂರಿನಲ್ಲಿರುವ ದೊಡ್ಡ ಆಸ್ಪತ್ರೆಗೆ ಕರ್ಕೊಂಡು ಹೋಗಯ್ಯ.

ಓಣಿನಿಂಗ : ಮೈಸೂರ್ನು ಕಾಣೆ; ಏನೂ ಕಾಣೆ. ನಾ ಹುಟ್ಟುದ್ ತಾವಿಂದ್ಯು ಎಲ್ಲೂ ಹೋದೋನೆ ಅಲ್ಲ ಸ್ವಾಮಿ, ನಿಮ್ಮ ಪಾದ ಅಂತೀನಿ, ಹೆಂಗೊ ಇಲ್ಲೇ ನನ್ನ ಮಗೀನ ಕಾಲು ಸುದ್ದ ಮಾಡ್ಕೊಡಿ ಸ್ವಾಮಿ.

ಡಾಕ್ಟರ್ : ಇಲ್ಲಾಗೊಲ್ಲ ಕಣಯ್ಯ.

ಓಣಿನಿಂಗ : ಅಯ್ಯಯ್ಯೋ.... ಹಂಗಾರೆ ಈಗೇನ್ ಮಾಡನೆ ಸ್ವಾಮಿ. ಕೂಲಿನಾಲಿ ಮಾಡ್ಕೊಂಡು ಜೀವನ ಮಾಡ್ತಿರು ಪರ್ದೇಶಿ ಕಣ್ ಸ್ವಾಮಿ ನಾನು. ಹೆಂಗಾರ ಮಾಡಿ ನನ್ಮಗೀನ ಕಾಲು ಉಳಿಸ್ಕೋಡಿ ಸ್ವಾಮಿ. ನನ್ನ ಜನ್ಮ ಇರೋತನಕ ನಿಮ್ಮ ನೆನೆಕೋತೀನಿ.

ಡಾಕ್ಟರ್ : ನೋಡಯ್ಯ, ನಮ್ಮ ಆಸ್ಪತ್ರೆನಲ್ಲಿ ಹೀಗೆ ಮುರ್ದೋಗಿರೊ ಮೂಳೆ ಕಟ್ಟೂಕೆ ಬೇಕಾದ ಸೌಲಭ್ಯಗಳಿಲ್ಲ. ನಾನು ಕಾಗದ ಬರ್ದು ಕೊಡ್ತೀನಿ, ಮೈಸೂರು ಆಸ್ಪತ್ರೆಗೆ ಕರ್ಕೊಂಡು ಹೋಗಯ್ಯ.

ಓಣಿನಿಂಗ : ಹಂಗನ್ಬೇಡಿ ಸ್ವಾಮಿ. ನಿಮ್ಮ ಪಾದ ಅಂತೀನಿ. ಹೆಂಗಾರ ಮಾಡಿ ಕಾಪಾಡಿ ಸ್ವಾಮಿ.

(ಎನ್ನುತ್ತಾ ಅವರ ಕಾಲಿಗೆ ಅಡ್ಡಬಿದ್ದು ನಮಸ್ಕರಿಸಲು ಪ್ರಯತ್ನಿಸುತ್ತಾನೆ. ಡಾಕ್ಟರ್ ದೂರ ಸರಿದು....)

ಡಾಕ್ಟರ್ : ಯಾರ್ಗಯ್ಯ ಹೇಳ್ತ ಇರೋದು?.... ಏನು ಒಂದು ಸಾರಿ ಹೇಳುದ್ರೆ ಅರ್ಥ ಆಗೊಲ್ವೆ ನಿಮ್ಗೆ?

(ಎನ್ನುತ್ತಾ ಸರಸರನೆ ತನ್ನ ಟೇಬಲ್ ಬಳಿಗೆ ಬಂದು, ಒಂದು ಚೀಟಿಯನ್ನು ತೆಗೆದುಕೊಂಡು)
ಏನಂತ ನಿನ್ನ ಮಗನ ಹೆಸರು?

ಓಣಿನಿಂಗ : ಕೆಂಪ ಅಂತ ಸ್ವಾಮಿ.

ಡಾಕ್ಟರ್ : (ಆ ಚೀಟಿಯಲ್ಲಿ ಹುಡುಗನ ಹೆಸರು ಮತ್ತು ಅವನಿಗೆ ಆಗಿರುವ ಪೆಟ್ಟಿನ ವಿವರಗಳನ್ನು ಬರೆದು)

ತಕೊಳಯ್ಯ...ಈ ಚೀಟಿನ ಮೈಸೂರಿನ ದೊಡ್ಡ ಆಸ್ಪತ್ರೆಗೆ ಹೋದ್ರೆ ಕೊಡು.

(ಎಂದು ಅವನ ಕೈಗೆ ತುರುಕಿ ಅಲ್ಲಿಂದ ಒಳಕ್ಕೆ ಹೋಗುತ್ತಾನೆ. ಓಣಿನಿಂಗನಿಗೆ ದಿಕ್ಕೆ ತೋಚದಂತಾಗುತ್ತದೆ. ತೀವ್ರ ಸಂಕಟದಿಂದ ಅಲ್ಲೆ ಕ್ಷಣಕಾಲ ನಿಲ್ಲುತ್ತಾನೆ. ಅಷ್ಟರಲ್ಲಿ ರಂಗದ ಬಲಬದಿಯಿಂದ ಒಬ್ಬ ವ್ಯಕ್ತಿ ಬರುತ್ತಾನೆ. ಆತನ ಎಡಗೈಗೆ ಪ್ಲಾಸ್ಟರ್ ಮಾಡಲಾಗಿದೆ)

ವ್ಯಕ್ತಿ : ಡಾಕ್ಟರು ಇಲ್ವೇನಯ್ಯ?

ಓಣಿನಿಂಗ : ಒಳಗವ್ರೆ ಕಣಪ್ಪ.

ವ್ಯಕ್ತಿ : ಇದ್ಯಾಕಯ್ಯ ಹಿಂಗೆ ನಿಂತಿದ್ದಿಯೇ?
(ಅಲ್ಲಿ ಮಲಗಿರುವ ಹುಡುಗನನ್ನು ನೋಡುತ್ತಾ)

ಏನಾಗಿದ್ದದು ಹುಡುಗನಿಗೆ?

ಓಣಿನಿಂಗ : ಬಲಗಾಲ್ನ ಮೂಳೆ ಮುರ್ದ್ಹೋಗಿದ್ದದಂತೆ ಕಣಪ್ಪ.

ವ್ಯಕ್ತಿ : ಏನಂದ್ರು ಡಾಕ್ರು?

ಓಣಿನಿಂಗ : ಸುದ್ದ ಮಾಡೋಕೆ ಇಲ್ಲಾಗೋದಿಲ್ಲ. ಮೈಸೂರು ದೊಡ್ಡ ಆಸ್ಪತ್ರೆಗೆ ಕರ್ಕೊಂಡು ಹೋಗು ಅಂದ್ರು.

ವ್ಯಕ್ತಿ : (ನಗಲಾರಂಭಿಸುತ್ತಾನೆ)

ಓಣಿನಿಂಗ : ಇದ್ಯಾಕಣ್ಣ ನಗ್ತ ಇದ್ದಿಯೇ?.... ನನ್ನ ಕಷ್ಟ ಕಂಡು ನಿಂಗೆ ನಗ್ಸರವೇನಪ್ಪ?

ವ್ಯಕ್ತಿ : ನಿನ್ನ ಕಷ್ಟ ಕಂಡು ಅಲ್ಲ ಕಣಯ್ಯ. ಈ ಡಾಕ್ರು ತಟವಟ ಕಂಡು ನಗು ಬತ್ತು. ನೋಡಯ್ಯ ಈ ಡಾಕ್ರು ಮೊದಮೊದಲು ಎಲ್ರುಗು ಹಿಂಗೇನೆ "ಇಲ್ಲಾಗೊದಿಲ್ಲ.... ಮೈಸೂರ್ಗೊ ಬೆಂಗಳೂರ್ಗೊ ಹೋಗಿ ಅಂತನೆ." ದುಡ್ಡ ಮಡಗುದ್ರೆ ಇಲ್ಲೆ ನೋಡ್ತನೆ.

ಓಣಿನಿಂಗ : ಈ ಡಾಕ್ಟರಯ್ಯ ಅಂಥಾವ್ನೆ?

ವ್ಯಕ್ತಿ : ಹೂ ಕಣಯ್ಯ.
(ಪ್ಲಾಸ್ಟರ್ ಮಾಡಿರುವ ತನ್ನ ಎಡಗೈಯನ್ನು ತೋರಿಸುತ್ತಾ)

ನೋಡಯ್ಯ, ಇದ್ಕೆ ಹದಿನೈದು ದಿನದ ಹಿಂದೆ ಸೈಕಲ್ ಮ್ಯಾಲಿಂದ ಬಿದ್ದುಬಿಟ್ಟು, ಈ ಎಡಗೈ ತಿರುಚೋಗಿ, ಮುಂದೋಳು ನೇತಾಡ್ತಿತ್ತು. ಅದೇ ಮುಖ ನಾನು ಈ ಆಸ್ಪತ್ರೆಗೆ ಬಂದೆ. ಇದೇ ಡಾಕ್ಟರಯ್ಯ ಕೈಯ ಪರೀಕ್ಷೆ ಮಾಡ್ಬುಟ್ಟು, ಮೂಳೆ ಮುರ್ದೋಗದೆ, ಇಲ್ಲಾಗೋದಿಲ್ಲ ಮೈಸೂರ್ಗೆ ಹೋಗು ಅಂದ. ನಾನು ನಿಜವೇನೋ ಅಂದ್ಕೊಂಡು ಹೊಂಟೋಯ್ತಿದ್ದೆ. ಅಷ್ಟೊತ್ತಿಗೆ ಇಲ್ಲೆ ಇದ್ದ ಆಸ್ಪತ್ರೆ ಜವಾನ ಅಂದ "ಅಯ್ಯೊ ಬೆಪ್ಪೆ, ಮೈಸೂರ್ಗು ಬೇಡ; ಎಲ್ಲೂ ಬೇಡ. ಈ ಡಾಕ್ಟರ್ಗೆ ದುಡ್ಡು ಕೊಟ್ರೆ, ಇವರೆ ಎಲ್ಲಾ ಚೆಂದಾಗೆ ಗುಣ ಮಾಡ್ತರೆ" ಅಂದ. ಅವನ ಮಾತ್ನಂಗೆ ಒಂದು ಹಸಿರು ನೋಟು ನೂರು ರೂಪಾಯಿ ಮಡಗ್ದೆ ನೋಡಪ್ಪ.... ಮೊದ್ಲು ಇಲ್ಲಾಗುದೆ ಇಲ್ಲ ಅಂದಿದ್ದೋನು "ನೀನು ಎಲ್ಲೂ ಹೋಗುದೆ ಬ್ಯಾಡ, ನಾನೆ ಕೈಯ ಮೊದಲಿನಂತೆ ಮಾಡ್ಕೊಡ್ತೀನಿ" ಅಂದ್ಬುಟ್ಟು, ಚೆನ್ನಾಗೆ ಕಟ್ಟವ್ನೆ ನೋಡಪ್ಪ. ಈ ಡಾಕ್ಟ್ರ ಕಳಿಯುವಂಗಿಲ್ಲ ಕಣಯ್ಯ. ಕೈಗುಣ ಭೋ ಚೆನ್ನಾಗದೆ. ಆದ್ರೆ ಏನ್ ಮಾಡ್ತಾ, ಒಸಿ ದುಡ್ಡಿನ ಪಿಶಾಚಿ. ಈಗೇನು ಮಾಡಿಯಯ್ಯ?

ಓಣಿನಿಂಗ : ನಂಗೇನು ತೋಚುದಿಲ್ಲ ಕನಣ್ಣ. ಆಯ್ಕೊಂಡು ತಿನ್ನು ಕೋಳಿ ಕಾಲು ಮುರ್ದಂಗೆ ದೇವ್ರು ಇದೊಂದು ಮಾಡ್ಬುಟ್ನಲ್ಲಪ್ಪ....
(ಎಂದು ಹೇಳುತ್ತಾ ಅಳುವುದಕ್ಕೆ ಪ್ರಾರಂಭಿಸುತ್ತಾನೆ.)

ವ್ಯಕ್ತಿ : ನೀನು ಅತ್ತರೆ... ಕರೆದ್ರೆ ಇಲ್ಲಿ ನಿಂಗೆ ಅಯ್ಯೋ ಅನ್ನೋರು ಯಾರಿದ್ದರು? ಬಿರಬಿರ್ನೆ ಹೋಗಿ ಏನಾದ್ರು ಮಾಡಿ ಒಸಿ ದುಡ್ಡುಕಾಸು ಅಮರಿಸ್ಕೊಂಡು ಬರೋಗು.

ಓಣಿನಿಂಗ : ನನ್ ಮಾತಲ್ಲಿ ನಿಂಗೆ ನಂಬ್ಕೆ ಇಲ್ವೇನಪ್ಪ? ನನ್ತಾವು ಒಂದು ಪೈಸೆನೂ ಇಲ್ಲ ಕಣಪ್ಪ.

ವ್ಯಕ್ತಿ : ಈ ಮಗೀನ ಕಾಲು ಹೋದ್ಮೇಲೆ.... ಈ ಮಗ ಇದ್ರು ಒಂದೆ; ಸತ್ರು ಒಂದೆ. ಈಗೊಂದು ಮಾತು ಹೇಳ್ತಿನಿ ಕೇಳ್ತೀಯಾ?

ಓಣಿನಿಂಗ : ಅದೇನು ಹೇಳಪ್ಪ?

ವ್ಯಕ್ತಿ : ಯಾವುದಾದ್ರು ಪಾತ್ರೆ ಪನಾಸು ಇದ್ರೆ, ಆ ಸೇಟುಗಳ ಹತ್ರ ಅಡ ಇಟ್ಬುಟ್ಟು ಒಸಿ ದುಡ್ಡು ತರೋಗಯ್ಯ.

ಓಣಿನಿಂಗ : ಬರ್ಗಾಲ ಬಂದಿದ್ದಾಗ ಅವ್ನ ಮಾರ್ಕೊಂಡು ಈ ಹಾಳಾದ್ ಹೊಟ್ಟೆಗೆ ಹಾಕ್ಕೊಂಡೆ ಕಣಪ್ಪ. ನಾಲ್ಕೈದು ಮಡ್ಕೆ ಕುಡ್ಕೆ ಬುಟ್ರೆ, ಇನ್ನೇನು ಇಲ್ಲ ಕಣಪ್ಪ ನನ್ತಾವು.

ವ್ಯಕ್ತಿ : ಹಂಗಾದ್ರೆ ಹಿಂಗಾರ ಮಾಡಯ್ಯ?

ಓಣಿನಿಂಗ : ಹೆಂಗಪ್ಪ?

ವ್ಯಕ್ತಿ : ಈ ಮಗೀನ ಕಾಲು ಶುದ್ಧ ಆದ್ಮೇಲೆ ಯಾರ್ದಾರ ಮನೇಲಿ ಎಮ್ಮೆನೊ ದನನೊ ಕಾಯೋಕೆ ಜೀತಕ್ಕೆ ಇರಿಸ್ತೀನಿ ಅಂದ್ಬುಟ್ಟು, ಒಂದು ಐವತ್ತೊ.... ನೂರ್ನೊ ಈ ಮಗೀನ ಮ್ಯಾಲೆ ಈಸ್ಕೊಂಡು ಬರೋಗಯ್ಯ.

ಓಣಿನಿಂಗ : ಈಗ ಯಾರು ಜೀತಕ್ಕೂ ಇರಿಸ್ಕೊಡಿಲ್ಲ ಕಣಪ್ಪ. ನಮ್ಮಂಥ ಪೇತುಪರೆಗೆ ಎಲ್ಲೂ ಮೂರ್ಕಾಸು ಹುಟ್ಟಲ್ತು.

ವ್ಯಕ್ತಿ : (ತೀವ್ರ ಬೇಸರದಿಂದ)

ದುಡ್ಡು ಕಾಸು ಇಲ್ದೇದ್ದ ಮ್ಯಾಲೆ ಇಲ್ಲಿಗ್ಯಾಕೆ ಬಂದೆ?

ಓಣಿನಿಂಗ : ಸರ್ಕಾರಿ ಆಸ್ಪತ್ರೆ ಅಂತ ಬಂದೆ ಕಣಪ್ಪ.

ವ್ಯಕ್ತಿ : ಸರ್ಕಾರಿ ಆಸ್ಪತ್ರೆ ಅಂದ್ರೆ ಏನ್ ತಿಳ್ಕೊಂಡಿದ್ದೀಯೆ?

ಓಣಿನಿಂಗ : (ಟೇಬಲ್ ಮೇಲೆ ಮಲಗಿದ್ದ ತನ್ನ ಮಗನನ್ನು ಬಾಚಿ ಎತ್ತುಕೊಂಡು, ಮುಂದಕ್ಕೆ ಬಂದು)

ನನ್ನಂಥ ಬಡಬಗ್ಗರಿಗೆ ಕಾಯ್ಲೆ ಕಸಾಲೆ ಬಂದಾಗ.... ಹಿಂಗೆ ಏನಾದ್ರು ಆಪತ್ ಬಂದಾಗ ಕಾಪಾಡ್ತದೆ ಅಂತ ನಂಬ್ಕೊಂಡು ಬಂದೆ.

ವ್ಯಕ್ತಿ : ಅಯ್ಯೊ ದಡ್ಡ.... ಸರ್ಕಾರಿ ಆಸ್ಪತ್ರೆ ವಿಷಯ ಇನ್ನೂ ನಿಂಗೆ ಗೊತ್ತಿಲ್ಲ. ಈಗ್ಲಾದ್ರು ಸರಿಯಾಗಿ ತಿಳ್ಕೊ.

“ಸರ್ಕಾರಿ ಆಸ್ಪತ್ರೆಗೆ ಬರೋದು ಒಂದೆ; ಸೂಳೆ ಮನೆಗೆ ಹೋಗೋದು ಒಂದೆ. ಎರಡು ಕಡೇನು ಜೇಬು ನೋಡೆ ವ್ಯವಹಾರ”.

ಓಣಿನಿಂಗ : ಹಂಗಾರೆ ನನ್ನ ಮಗೀನ ಗತಿ?

ವ್ಯಕ್ತಿ : ನನ್ನೇನು ಕೇಳ್ತೀಯೆ?

(ಪ್ರೇಕ್ಷಕರ ಕಡೆ ಕೈ ತೋರಿಸುತ್ತಾ)
ಆಯ್ತು ಇರೋ ಅನ್ಯಾಯಗಳನ್ನೆಲ್ಲಾ ನೋಡ್ಕಂಡು, ಕಂಡ್ರು ಕಾಣ್ದೆ ಇರೋರಂಗೆ ಕಣ್ಣು ಬಾಯಿ ಮುಚ್ಕೊಂಡು ಬಾಳ್ತಾವ್ರಲ್ಲ ನಮ್ಮ ಜನ.... ಅವರನ್ನ ಕೇಳು....

(ಎನ್ನುತ್ತಿದ್ದಂತೆಯೇ ಹಿನ್ನೆಲೆಯಿಂದ ದ.ರಾ. ಬೇಂದ್ರೆಯವರು ರಚಿಸಿರುವ ಹಾಡೊಂದು ಕೇಳಿ ಬರುತ್ತದೆ. ಇವರೆಲ್ಲರೂ ತಾವು ನಿಂತಿರುವ ಭಂಗಿಗಳಲ್ಲಿಯೇ ಸ್ತಬ್ಧರಾಗಿ ನಿಲ್ಲುತ್ತಾರೆ)

ಕುರುಡು ಕಾಂಚಾಣ ಕುಣಿಯುತಲಿತ್ತೋ
ಕಾಲಿಗೆ ಬಿದ್ದವರ ತುಳಿಯುತಲಿತ್ತೋ
ಕುರುಡು ಕಾಂಚಾಣ
ಕೂಲಿ ಕುಂಬಳಿಯವರ
ಪಾಲಿನ ಮೈದೊಗಲ
ಧೂಳಿನ ಭಂಡಾರ ಹಣೆಯೊಳಗಿತ್ತೋ
ಕುರುಡು ಕಾಂಚಾಣ ಕುಣಿಯುತಲಿತ್ತೋ
ಕಾಲಿಗೆ ಬಿದ್ದವರ ತುಳಿಯುತಲಿತ್ತೋ
ಕುರುಡು ಕಾಂಚಾಣ.

(ಹಾಡು ಮುಗಿಯುತ್ತಿದ್ದಂತೆಯೇ ರಂಗದ ಮೇಲೆ ಕತ್ತಲು ಆವರಿಸುತ್ತದೆ. ರಂಗದ ಮೇಲೆ ಮತ್ತೆ ಬೆಳಕು ವ್ಯಾಪಿಸಿದಾಗ ವಿಶ್ವನಾಥ, ಬೋರೇಗೌಡ, ದೊಡ್ಡೈದ ಮತ್ತು ಕೂಲಿಯವರೆಲ್ಲರೂ ಮೊದಲಿನಂತೆಯೇ ನಿಂತಿರುತ್ತಾರೆ)

ವಿಶ್ವನಾಥ : ಕೇವಲ ಹಣಕ್ಕಾಗಿ ಎಂಥೆಂಥಾ ಕೆಲ್ಸ ಮಾಡ್ತಾರೆ ಅನ್ನೋದು ಗೊತ್ತಾಯ್ತೆ ಬೋರೇಗೌಡ್ರೆ.

ಬೋರೇಗೌಡ : ಒಳ್ಳೆ ಕಥೆ ಆಯ್ತು ನಿಮ್ದು. ಅವರು ಹಂಗೆ ದುಡ್ಡು ತಿನ್ತರೆ; ಇವರು ಹಿಂಗೆ ನುಂಗ್ತರೆ ಅಂತ ಹೇಳೂಕೆ ಹಿಡ್ಕೊಂಡ್ರಲ್ಲ, ಅದ ಕಟ್ಕೊಂಡು ನಂಗೇನು ಸ್ವಾಮಿ? ಇವನು ನಂಗೆ ಕೊಡ್ಬೇಕಾಗಿರು ದುಡ್ಗು.... ಅದಕ್ಕು ಏನು ಸಂಬಂಧ?

ವಿಶ್ವನಾಥ : ನೀವು ಇಂಥ ಪ್ರಶ್ನೆ ಕೇಳ್ಳಿ ಅಂತ್ಲೆ ನಾನು ಇಷ್ಟೆಲ್ಲಾ ದೀರ್ಘವಾಗಿ ನಿಮಗೆ ಹೇಳಿದ್ದು.

(ಬೋರೇಗೌಡರ ಹಣವನ್ನು ತಿಂದು, ಅವರಿಂದ ಏಟನ್ನು ತಿಂದಿದ್ದ ಕೂಲಿಯವನನ್ನು ರಂಗದ ಮುಂದಕ್ಕೆ ರೆಟ್ಟೆ ಹಿಡಿದು ಎಳೆದುಕೊಂಡು ಬಂದ ವಿಶ್ವನಾಥ, ಅವನನ್ನು ತೋರಿಸುತ್ತಾ)
ಇವನು ನಿಮ್ಗೆ ಏನು ಮಾಡವ್ನೆ?

ಬೋರೇಗೌಡ : (ಮತ್ತೆ ತೀವ್ರ ಕೋಪದಿಂದ)
ಐವತ್ತು ರೂಪಾಯಿ ತಿನ್ಕೊಂಡವ್ನೆ ಕಳ್ಳಬಡ್ಡಿ ಹೈದ.

ವಿಶ್ವನಾಥ : ಇವನು ಮಾಡಿರೋದು ಸರಿ ಅಂತ ನಾನು ಹೇಳೊದಿಲ್ಲ. ಅನ್ನ ಹುಟ್ಟುತ್ತಿದ ಜಾಗದಲ್ಲೆ ಅನ್ಯಾಯ ಮಾಡವ್ನೆ. ನೀವು ಇವನ್ಗೆ ಹೊಡ್ಡುದ್ದನ್ನು ನಾನು ತಪ್ಪು ಅನ್ನೊಲ್ಲ. ಇನ್ನೆಲ್ಲೂ ಮಾಡ್ಬಾರ್ದು.... ಹಂಗೆ ಇನ್ನು ನಾಲ್ಕು ಬೇಕಾದ್ರೆ ಹೊಡೀರಿ. ಗೌಡರೇ, ಇವನು.... ಇವನಂಥ ಬಡವರು ಮಾಡಿದ ಅನ್ಯಾಯಕ್ಕೆ ಅಲ್ಲಲ್ಲೆ ಬೀದೀಲಿ ನಿಲ್ಲಿಸ್ಕೊಂಡು ಮುಸುಡಿ ಮೇಲೆ ಕೆಚ್ಚಿ ಶಿಕ್ಷೆ ಕೊಟ್ಟಂಗೆ, ನನ್ನಂಥವ್ರು ಮಾಡ್ತಿರು ಅನ್ಯಾಯಕ್ಕೆ ಯಾರು ಒದಿತರೆ ಹೇಳಿ?

ಬೋರೇಗೌಡ : (ಮೌನದಿಂದ ವಿಶ್ವನಾಥನ ಮಾತುಗಳನ್ನು ಆಲಿಸುತ್ತಿರುತ್ತಾನೆ.)

ವಿಶ್ವನಾಥ : ಸರ್ಕಾರದ ನಾನಾ ಅಧಿಕಾರಗಳಲ್ಲಿ ಇದ್ಕೊಂಡು.... ಸಾವಿರಾರು ರೂಪಾಯಿ ಸಂಬಳ ತಿಂತಾಯಿರೋ ನಮ್ಮಂಥವ್ರು.... ಈ ಸಮಾಜಕ್ಕೆ ಅನ್ಯಾಯ ಮಾಡ್ದಾಗ, ನಮ್ಮ ಕತ್ತಿನ ಪಟ್ಟಿಗೆ ಕೈಹಾಕಿ "ಥೂ.... ಲಂಚಕೋರರ.... ಭ್ರಷ್ಟಾಚಾರಿಗಳ... ನಿಮಗೆ ಅನ್ನ ಕೊಡ್ತಾಯಿರೋದು ಈ ಸಮಾಜ; ನಿಮ್ಮ ಮನೆ ದೀಪ ಉರೀತಾಯಿರೋದು ಈ ದೇಶದ ಲಕ್ಷಾಂತರ ಮಂದಿ ಬೆವರಿನ ಹನಿಯಿಂದ. ಅಂತಾವ್ರು ತಿನ್ನು ಅನ್ನಕ್ಕೆ ಮಣ್ಣಾಕಿ, ನೀವು ಮೃಷ್ಟಾನ್ನ ತಿಂದ್ರೆ ನಿಮಗೆ ಖಂಡಿತ ಉಳಿಗಾಲವಿಲ್ಲ.... ಹುಷಾರಾಗಿರಿ.... ಅನ್ನ ತಿನ್ನು ಬಾಯಲ್ಲಿ

ಹೇಲ್ ತಿನ್ನು ಕೆಲ್ಸ ಮಾಡ್ಬೇಡಿ" ಅಂತ ಉಗ್ದು ನಮ್ಮ ಮುಖದ ಮೇಲೆ ನಾಲ್ಕು ಬಿಗಿಯೋರು ಯಾರಿದ್ದರು ತೋರ್ಸಿ? ಇವನ್ಗೆ ಹೊಡ್ದಂಗೆ ನಮ್ಮಂಥವರ್ಗು ಹೊಡೆದಿದ್ರೆ ನಮ್ಮ ದೇಶದ ಸ್ಥಿತಿ ಹೀಗಿರ್ತಿತ್ತೆ?

ಬೋರೇಗೌಡ : ನೀವು ಹೇಳೊ ಮಾತಿನಲ್ಲೂ ನಿಜ ಅದೆ ಅನ್ನಿ. ಆದ್ರೆ....

ವಿಶ್ವನಾಥ : ಆದ್ರೆ.... ಅಂದ್ರೆ ಏನು ಬೋರೇಗೌಡ್ರೆ?

(ಕೂಲಿಯವನನ್ನು ತೋರಿಸುತ್ತಾ)

ನೋಡಿ, ಇಲ್ಲಿ ನಿಂತವ್ನಲ್ಲ ಈ ಕೂಲಿಯವನು ಇವನೊಬ್ಬ ಅನಕ್ಷರಸ್ಥ. ಹಳ್ಳಿ ಗುಗ್ಗು. ಕೂಲಿ ನಾಲಿ ಮಾಡ್ಕೊಂಡು ಹೊಟ್ಟೆ ಹೊರೆದುಕೊಳ್ಳುವ ಗತಿಗೇಡಿ. ನಮ್ಮ ಸಮಾಜದ ದೃಷ್ಟಿಯಲ್ಲಿ ಅತ್ಯಂತ ನಿಕೃಷ್ಟ ವ್ಯಕ್ತಿಯಲ್ಲವೆ?

ಬೋರೇಗೌಡ : ಹೂ ಕಣ ಹೇಳಿ.

ವಿಶ್ವನಾಥ : ನಾನು ಒಬ್ಬ ಅಕ್ಷರಸ್ಥ. ಬೇಕಾದಷ್ಟು ವಿಷಯ ತಿಳ್ಕೊಂಡಿರುವ ಪದವೀಧರ. ಸಮಾಜದಲ್ಲಿ ಸಾಕಷ್ಟು ಪ್ರತಿಷ್ಠಿತವಾದ ಸ್ಥಾನ ಪಡೆದಿರುವ ಒಬ್ಬ ವ್ಯಕ್ತಿ ಅಲ್ಲವೇ?

ಬೋರೇಗೌಡ : (ಹೌದು ಎನ್ನುವಂತೆ ತಲೆಯಾಡಿಸುತ್ತಾನೆ.)

ವಿಶ್ವನಾಥ : ಇವನು ನಿಮಗೆ ಮಾಡ್ದಂಗೆ.... ಇನ್ನು ಮುಂದಕ್ಕು ತನ್ನ ಜೀವಮಾನದಲ್ಲಿ ಇನ್ನೊಂದು ಹತ್ತು ಜನಕೆ ಮೋಸ ಮಾಡಬಹುದು; ಇನ್ನು ಹೆಚ್ಚು ಅಂದ್ರೆ ಒಂದು ಮನೇನೆ ನಾಶ ಮಾಡಬಹುದು; ಅಬ್ಬಬ್ಬಾ ಅಂದ್ರೆ ಒಂದು ಊರ್ನೆ ಹಾಳು ಮಾಡಬಹುದು. ಆದ್ರೆ ನನ್ನಂಥ ವಿದ್ಯಾವಂತರು.... ಸರ್ಕಾರಿ ಸಂಬಳ ತಿಂತಾಯಿರೊ ಅಕ್ಷರವಂತರು.... ದೇಶ ಕಟ್ಟಿ ಬೆಳೆಸಬೇಕಾದ ರಾಜಕಾರಣಿಗಳು ಮಾಡ್ತ ಇರೊ ಅನ್ಯಾಯದಿಂದ ಇಡೀ ಜನಾಂಗದ.... ಈ ಸಮಾಜದ.... ಈ ದೇಶದ ಭವಿಷ್ಯವೇ ಹಾಳಾಗ್ಹೋಯ್ತಿಲ್ವೆ? ಚೆನ್ನಾಗಿ ಆಲೋಚನೆ ಮಾಡಿ ಹೇಳಿ.... ಇವತ್ತಿನ ನಮ್ಮ ದೇಶದ ಹೀನಸ್ಥಿತಿಗೆ ಇವನಂಥ ಬಡವರು ಕಾರಣರೋ ಅಥವಾ ನನ್ನಂಥ ಅಕ್ಷರವಂತ ಲೋಪರ್ಗಳು ಕಾರಣರೋ?

ದೊಡ್ಡೈದ : ಇದ್ನೆಯಾ ನೀವು ಕಾಲೇಜ್ನಲ್ಲಿ ನಮ್ಮ ಹೈಕ್ಳಿಗೆ ಹೇಳ್ಕೊಡುದು?

ವಿಶ್ವನಾಥ : ಇದನ್ನ ಹೇಳ್ಕೊಡುವಂತಿದ್ರೆ ನಮ್ಮ ದೇಶದ ಸ್ಥಿತಿಯೆ ಬೇರೆ ತರ ಇರ್ತಿತ್ತು. ಅನ್ಯಾಯ ಮಾಡ್ತಿರೋರ ಎದೆ ಮೇಲೆ ಒದ್ದು, ಅಂತಹವರ ಹುಟ್ಟಡಗಿಸು ವಿದ್ಯೆಯನ್ನು ನಮ್ಮ ಹುಡುಗರ್ಗೆ ಹೇಳ್ಕೊಡುವಂಥ ಕಾಲ ಬರ್ಬೇಕು.

ಬೋರೇಗೌಡ : ಅಂಥಾವ್ರ ಮೇಲೆ ಕೈ ಮಾಡುದ್ರೆ, ಪೊಲಿಸ್ನೋರು ಏನು ಕಡ್ಲೆಪುರಿ ತಿಂತಾ ಇರ್ತಾರ?.... ಕೋರ್ಟು ಕಚೇರಿ ಇರೋದು ಏಕೆ?.... ಬಲಿ ಎತ್ಬುಡ್ತರೆ.... ಬಲಿ....

ವಿಶ್ವನಾಥ : ನಿಜ ಬೋರೇಗೌಡ್ರೆ... ನಮ್ಮ ದೇಶದಲ್ಲಿ ಪೊಲಿಸ್ನೋರು.... ಕೋರ್ಟು ಕಛೇರಿಗಳು ಇರೋದು, ಕೆಟ್ಟ ರೀತಿ ಹಣ ಸಂಪಾದ್ನೆ ಮಾಡ್ತಾಯಿರೊ ಲೋಪರ್ಗಳನ್ನ ಉಳ್ಸೋಕೆ.... ಬೆಳ್ಸೋಕೆ.

ಬೋರೇಗೌಡ : ಇದೇನು ಮೇಷ್ಟ್ರೆ? ಸ್ವಲ್ಪ ಹದ್ದು ಮೀರಿ ಮಾತಾಡ್ತಾ ಇದ್ದೀರಿ. ನಮ್ಮ ಎಂ.ಎಲ್.ಎ. ಬಯ್ತಿರಿ.... ಡಾಕ್ಟ್ರು ಬಯ್ತಿರಿ.... ಎಲ್ಲಕ್ಕಿಂತ ಹೆಚ್ಚಾಗಿ ನಿಮ್ಮನ್ನ ನೀವೇ ಬಯ್ಕೋತಿರಿ. ನಿಮ್ಗೇನು ಹುಚ್ಚೊ ಗಿಚ್ಚೊ ಹೆಂಗೆ?

ದೊಡ್ಡೈದ : ಎಲ್ಲೊ ಗ್ರಾಚಾರ ವಕ್ರಿಸದೆ ಅಂತ ಕಾಣ್ತದೆ!

ವಿಶ್ವನಾಥ : ಸ್ವಲ್ಪ ಹಲ್ಲು ಹಿಡಿದು ಮಾತಾಡ್ರಿ.

ಬೋರೇಗೌಡ : ಅವನಲ್ಲ ಕಣ್ ಮೇಷ್ಟ್ರೆ, ನೀವು ಸರಿಯಾಗಿ ಮಾತಾಡೂದ ಕಲಿಬೇಕಾಗಿರೂದು. ಯಾಕೋ.... ಅನ್ನ ತಿನ್ನು ಬಾಯಲ್ಲಿ ಮಣ್ಣು ಹಾಕೋವಂಗೆ ಕಾಣ್ತಾದೆ.

ವಿಶ್ವನಾಥ : ಆ ಕೂಲಿಯವನನ್ನ ಗದರಿಸ್ದಂಗೆ ನನ್ನ ಗದರಿಸ್ಬೇಡಿ.

ಬೋರೇಗೌಡ : ರ್ರೀ ಹೋಗ್ರಿ.... ಏನೋ ಒಸಿ ಗೌರವ ಕೊಟ್ರೆ ಅದ ಉಳಿಸ್ಕೋದೆಂಗೆ ಅನೋದು ಗೊತ್ತಿಲ್ಲ. ನ್ಯಾಯವಾಗಿ ಪಾಠ ಮಾಡ್ಕೊಂಡು ಇರೋದು ಬುಟ್ಬುಟ್ಟು.... ಹಿಂಗೆಲ್ಲಾ ರಾಜಕೀಯ ಮಾಡ್ಕೊಂಡೆ ನಮ್ಮ ಹೈಕ್ಳನೆಲ್ಲ ಹಾಳ್ ಮಾಡ್ತಾಕುಬುಟ್ರಿ. ಮೊದಲು ನಿಮ್ಮ ಇಲ್ಲಿಂದ ಎತ್ತಂಗಡಿ ಮಾಡಿಸ್ಬೇಕು.

ವಿಶ್ವನಾಥ : ಗೌಡ್ರೆ.... ನೀವು ತುಂಬಾ ಹಗುರವಾಗಿ ಮಾತಾಡ್ತಾ ಇದ್ದೀರಿ.

ದೊಡ್ಡೈದ : ಸ್ವಾಮಿ, ಇದ್ಯಾವುದೊ ಸಣ್ಣ ವಿಷಯಕ್ಕೆ ನೀವು ತಲೆ ಹಾಕ್ಕೊಂಡು ಬಂದು ದೊಡ್ಡದು ಮಾಡ್ಕೊತ ಇದ್ದೀರಲ್ಲ. ನಡೀರಿ ಸ್ವಾಮಿ.... ನಡೀರಿ.

(ಎಂದು ವಿಶ್ವನಾಥನನ್ನ ಅಲ್ಲಿಂದ ಹೋಗುವಂತೆ ಒತ್ತಾಯಿಸುತ್ತಾನೆ. ವಿಶ್ವನಾಥ ಒಂದು ರೀತಿಯ ಅವಮಾನ ಹಾಗೂ ನೋವಿನಿಂದ ಕೂಡಿದವನಾಗಿ ಗೌಡನನ್ನ ದುರುಗುಟ್ಟುಕೊಂಡು ನೋಡುತ್ತಾ, ಅಲ್ಲಿಂದ ತೆರಳುತ್ತಾನೆ.)

ಬೋರೇಗೌಡ : ಏ.... ಹೋಗಯ್ಯ.... ಅದೇನ್ ಹಂಗೆ ದುರುಗುಟ್ಕೊಂಡು ನೋಡಿಯೆ. ಕಾಲೇಜ್ನಲ್ಲಿ ಹೈಕ್ಳ ಹೆದರಿಸ್ದಂಗೆ ಅಂತ ತಿಳ್ಕೊಂಡ. ನಿನ್ನಂಗೆ ಬಂಡಿಬುಡುರ್ನ ನಾನು ಬೇಕಾದಷ್ಟು ನೋಡಿವ್ನಿ ಕಣಾ. ಲೋ ದೊಡ್ಡೈದ ಈ ಬೊಡ್ಡತ್ತದ್ದು ಬ್ಯಾರೆ ಬಂದು ತಲೆ ಕೆಡಿಸ್ಬುಟ್ನಲ್ಲ.

ದೊಡ್ಡೈದ : ಶನಿ ಎಲ್ಲೊ ಎಂಟ್ನೆ ಕಡೆ ಬಂದವ್ನೆ ಅಂತ ಕಾಣ್ತಾದೆ. ಅದ್ಕೆ ಹಂಗಾಡ್ತಾವ್ನೆ.

ಬೋರೇಗೌಡ : (ಕೂಲಿಯವನ ಕಡೆ ತಿರುಗಿ)
ಲೇ, ಮೊದ್ಲು ನನ್ನ ದುಡ್ಡ ಮಡಗ್ಬುಟ್ಟು ಮುಂದಕ್ಹೋಗು... ಮಡಗ್ಲ ನನ್ನ ಹಣವಾ...

(ಎನ್ನುತ್ತಾ ಮತ್ತೆ ಹೊಡೆಯಲೆಂದು ಮುನ್ನುಗ್ಗುತ್ತಾನೆ. ಅಷ್ಟರಲ್ಲಿ ಬಡರ ಅಡ್ಡ ಬಂದು "ಬುಡ್ರಪ್ಪೋ.... ಬುಡ್ರಪ್ಪೋ" ಅನ್ನುತ್ತಾ ತಡೆಯಲೆತ್ನಿಸುತ್ತಾನೆ.)

ಏನ್ಲಾ ಬುಡೋದು? ನೀನು ಕೊಟ್ಟಿಯೇನ್ಲಾ ನನ್ನ ದುಡ್ಡ?

ಬಡರ : (ತಲೆ ಕೆರೆದುಕೊಳ್ಳುತಾ)
ನಾನೆಲ್ಲಿಂದ ತಂದು ಕೊಡೂಕಾದದಪ್ಪ?

ಬೋರೇಗೌಡ : ನಿಂಗ್ಯಾಕೆ ಮತ್ತೆ.... ಸುಮ್ನೆ ನಿಂತ್ಕೊದ ಕಲೀಲ. ಶಿವಪೂಜೇಲಿ ಕರಡಿ ಬುಟ್ಟಂಗೆ ಯಾಕೆ ಮಧ್ಯಕ್ಕೆ ತಲೆ ಹಾಕ್ಕೊಂಡು ಬಂದಿದ್ದೀಯೆ? ನನ್ನ ದುಡ್ಡು ಮಡಗು ತನಕ ಬುಡುಗಿಡು ಮಗ ನಾನಲ್ಲ.

ಬಡರ : ಹಂಗಲ್ಲ ಕಣ್ರಪ್ಪ.

ದೊಡ್ಡೈದ : ಧರ್ಮದೇವತೆ ನಿಮ್ಮಂಥಾವರ್ಗೆ ಅದೆಂಗಯ್ಯ ಅನ್ನ ಹುಟ್ಸಳು?

ಬಡರ : ಹಗಲು ರಾತ್ರಿ ಅನ್ನದೆ ಕಷ್ಟಪಟ್ಟು ಗೆಯ್ತಿವಿ ಕಣ್ರಪ್ಪ. ಅವ್ಳು ಕೊಡ್ದೆ ಏನ್ಮಾಡಳು. (ಕೂಲಿಯವನ ಕಡೆ ಕೈ ತೋರಿಸುತ್ತಾ)

ಎಲ್ಲೋ ಇಂಥಾವರು ಒಂದಿಬ್ಬರು ಎಕ್ಕಡ ತಿನ್ನೋ ಕೆಲ್ಸ ಮಾಡ್ಬುಟ್ರು ಅಂದ್ರೆ.... ಎಲ್ರೂ ಅಂಥಾವ್ರೆ ಅಂತ ತಿಳ್ಕೊಂಡ್ರಾ.

ಬೋರೇಗೌಡ : ಲೋ... ನಿನ್ನಂಥ ಹರಿಶ್ಚಂದ್ರನ ಮೊಮ್ಮಕ್ಳ ನಾನು ಕಂಡಿವ್ನಿ ಕಣ ಹೋಗ್ಲಾ. ಒಂದು ಹೇಲು ಮೂರು ತುಂಡಾದ ಮಾತ್ರಕ್ಕೆ ಬ್ಯಾರೆಬ್ಯಾರೆಯಾಗ್ಬುಟ್ಟದೆ.... ಎಲ್ಲಾ ಒಂದೇ ವಾಸ್ನೆ ಅಲ್ವೆ?

ಬಡರ : ನಮ್ಮಂಥ ಬಡವರ್ದಾದ್ರೆ ಹಿಂಗೆ ಎತ್ತಾಡ್ಬುಡ್ತೀರಿ... ಇಲ್ಲಿ ಹೋದ್ನಲ್ಲ ಆ ಹೊಯ್ಕೆ ಹೇಳ್ದಂಗೆ, ನಿಮ್ಮಂಥ ದೊಡ್ಡೋರ ತಪ್ಪ ಎತ್ತಿ ಆಡೋರೆ ಇಲ್ವಲ್ಲಾ!

ಬೋರೇಗೌಡ : ಏನ್ಲಾ ಅದು ಬಡ್ಡಿಹೈದ್ನೆ? ನಾನೇನ್ಲಾ ಮಾಡಿದ್ದನು ಅಂಥಾ ಅನ್ಯಾಯವ ನಿಂಗೆ?

ಬಡರ : ನೀವಲ್ಲ ಕಣ ಕೇಳಿ. ಆ ಕಾರ್ಕಳ್ಳಿ ತಿಮ್ಮೇಗೌಡ ಅಂತ ಅವ್ನಲ್ಲ, ಗೊತ್ತೆ ನಿಮ್ಗೆ?

ಬೋರೇಗೌಡ : ಹೂ ಕಣ ಹೇಳ್ಳೆ.... ಈ ಸುತ್ತ ಹತ್ತು ಹಳ್ಳಿಗೆ ನಾನು ದೊಡ್ಡ ಗೌಡ ಅನ್ನಿಸ್ಕೊಂಡಿರುವಂಗೆ, ಆ ಸುತ್ಗೆ ಅವನು ದೊಡ್ಡ ಕುಳ ಅಲ್ವೇನ್ಲ?

ಬಡರ : ಆ ಗೌಡ ಎಂಥಾ ಕೆಲ್ಸ ಮಾಡ್ದ ಗೊತ್ತೇನಪ್ಪ?

ಬೋರೇಗೌಡ : ಏನು ಮಾಡ್ದ?

ಬಡರ : ಮೂರು ವರ್ಷ ನಾನು ಅವನ ಮನೇಲಿ, ಮನೆ ಮಗನಿಗಿಂತ ಹೆಚ್ಚಾಗಿ ದುಡ್ದೆ. ಹಗಲು ರಾತ್ರಿ ಅನ್ದೆ ಹೊಂಗ್ಲೋ ಅಂತ ಗೇದೆ. ಆಗಿನ್ನು ನಂಗೆ ಲಗ್ನ ಆಗಿರ್ಲಿಲ್ಲ. ನನ್ನ ಲಗ್ನದ ಸಮಯದಲ್ಲಿ "ನಾನು ಗೇದ ದುಡ್ಡ ಕೊಡ್ರಪ್ಪ" ಅಂತ ಕೇಳುದ್ರೆ.... ಏನಂದ ಗೊತ್ತೇನಪ್ಪ?.... "ಯಾವುದ್ಲಾ ಬೋಳಿಮಗ್ನೆ ನಿಂಗೆ ಕೊಡ್ಬೇಕಾಗಿರೋದು? ಎಲ್ಲೂ ಅನ್ನಕ್ಕೆ ಗತಿಯಿಲ್ದೆ ಬಂದು ನನ್ನ ಮನೆ ಸೇರ್ಕೊಂಡು ಮೂರು ವರ್ಷದಿಂದ ಹೊಟ್ಟೆ ತುಂಬಾ ಪೋಣಿಸಿದ್ದಿಯಲ್ಲಾ ಯಾರಪ್ಪನ ಮನೇದ್ಲಾ ಅದು? ವರ್ಷಕ್ಕೆ ಎರಡೆರಡು ಜೊತೆ ಹೊಸ ಬಟ್ಟೆ ಹಾಕ್ಕೊಂಡು ಮೆರ್ದಲ್ಲಾ, ಅದ್ರ ಲೆಕ್ಕ ಎಲ್ಲಿಗೆ ಬುಟ್‌ಬುಟ್ಟೀಲಾ? ಎಲ್ಲಾನು ಬರ್ದು ಇಟ್ಟಿವ್ನಿ. ನಿನ್ನ ಮೇಲೆ ನಂದು ಇನ್ನೂ ನೂರು ರೂಪಾಯಿ ಅದೆ ಕಲೆ. ಅದು ತೀರಿಸ್ಬುಟ್ಟು ಆಚೆಗೆ ಹೋಗ್ಲಾ "ಅಂತ ಸುಳ್ಳುಪಳ್ಳು ಲೆಕ್ಕನೇ ಕೊಡೂಕೆ ಬಂದ. ಅವ್ನ ಮಾತ ಕೇಳಿ ನಂಗ್ಯಾಕೊ ಭೊ ಐಲು ಹತ್ತಂಗೆ ಆಗೋಯ್ತು." ನಿಮ್ಮನೇಲಿ

ಪುಕ್ಸಟೆ ಗೆಯ್ಯೋಕೆ ನಂಗೇನು ಅರಗಟ್ಟಿರಲಿಲ್ಲ. ಮಡಗಯ್ಯ ನಂಗೆ ಬರಬೇಕಾದ್ದು ಮುನ್ನೂರು ರೂಪಾಯ್ನ" ಅಂದೆ.

ಬೋರೇಗೌಡ : ಕೊಟ್ನೆ?

ಬಡರ : ಕೊಟ್ಟ.... ಪೂರಾ ಕೊಟ್ಟ.... ಅವನು, ಅವನ ಮಕ್ಳು ಎಲ್ಲಾ ಸೇರ್ಕೊಂಡು ಮೊಕ ಮುಸಡಿ ಅಂತ ನೋಡ್ದೆ ಚೆನ್ನಾಗಿ ಹೊಡ್ದು, ಮನೆಯಿಂದ ಆಚೆಗೆ ತಳ್ಬುಟ್ರು. ಅವತ್ತು ಅಷ್ಟು ದೊಡ್ಡ ಊರ್ನಲ್ಲೇ ನಂಗ್ಯಾರು ನ್ಯಾಯ ಹೇಳೋಕೆ ಮುಂದಕ್ಕೆ ಬರಲಿಲ್ಲ. ಅವನೇನು ನನ್ನ ದುಡ್ಡ ತಿನ್ಕೊಂಡು ಬದ್ಕೋಗ್ಲಿಲ್ಲ. ನಾನೇನು ಕೆಟ್ಟೋಗ್ಲಿಲ್ಲ. ಎಲ್ಲಾದ್ರು ಗೇದ್ರೆ ಒಂದು ತುತ್ತು ಅನ್ನ ಸಿಕ್ಕೇ ಸಿಗ್ತದೆ.

ಬೋರೇಗೌಡ : ಲೇ, ನಿನ್ನ ಕಂತೆ ಪುರಾಣ ಕಟ್ಕೊಂಡು ನಂಗೇನಾಗ ಆಗ್ಬೇಕಾಗಿರೋದು?

ಬಡರ : ನನ್ನಂಥವ್ನೆ ಮುನ್ನೂರು ಬುಟ್‌ಬುಟ್ಟು ತೆಪ್ಪಗಿರೋವಾಗ, ಈ ಬಡತ್ತದ್ದಕೆ ಕೊಟ್ಟಿರು ಐವತ್ತು ರೂಪಾಯಿ ಎಲ್ಲೊ ಬಿದ್ದೋಯ್ತು ಅಂತ ತಿಳ್ಕೊಂಡು ಬುಟ್‌ಬುಡಣ್ಣೋ.

ಬೋರೇಗೌಡ : ಐನಾತಿ ಕುಳ ಕಲೇ ನೀನು. ಎಷ್ಟು ದಿನದಿಂದ ಕಲ್ತಿದ್ದಾ ಇಂಥಾ ನ್ಯಾಯ ಹೇಳೋದ?

ಬಡರ : ಹಂಗಲ್ಲ ಕನಣ್ಣ.

ಬೋರೇಗೌಡ : ಹೋಗೋ ಲೋ.... ಹೋಗೊ.... ಮನಮುರ್ಕ ನನ್ಮಗ್ನೆ.... ಮನೆ ಮನೆಗಳು.... ಊರು ಊರ್ಗಳೆ ಎಕ್ಕಹುಟ್ಟೋಯ್ತುವೆ ನಿನ್ನಂಥ ತಾಯ್ಗಂಡ ನನ್ಮಕ್ಳು ನ್ಯಾಯ ಹೇಳೂಕೆ ಶುರು ಮಾಡ್ಬುಟ್ರೆ.
(ಕೂಲಿಯವನ ಕಡೆ ತಿರುಗಿ)
ಮಡಗ್ಲ ನನ್ನ ದುಡ್ಡ.

ದೊಡ್ಡೈದ : ನಿಂಗೂ ಎಲ್ಲೊ ತಲೆ ಕೆಟ್ಟೋಗದೆ ಕನಣ್ಣ. ಮಡಗ್ಲ.... ಮಡಗ್ಲ ಅಂತ ಇದ್ದೀಯಲ್ಲ, ಆ ಪೇತುಪರೆ ತಾವು ಏನಿದ್ದದ್ದು ಮಡುಗೂಕೆ?.... ಅವನ್ನ ಕೆಚ್ಚು ಬಡ್ಕೊಂಡ್ರೆ ತಾನೆ ಮೂರ್ಕಾಸು ಸಿಕ್ಕದೆ?

ಬೋರೇಗೌಡ : ಹಂಗಂತ, ಬುಟ್‌ಬುಟ್ಟಿಲಾ?

ದೊಡ್ಡೈದ : ಇನ್ನೇನು ಹಿಡ್ಕೊಂಡು ತಿನ್ನೊಂಡಿಯಾ?

ಬಡರ : ಅಪ್ಪೋ.... ಈಗೊಂದು ಕೆಲ್ಸ ಮಾಡಿ.

ಬೋರೇಗೌಡ : ಏನ್ಲಾ ಅದು?

ಬಡರ : ನಿಮಗ್ಗೆ ಬರಬೇಕಾಗಿರು ದುಡ್ಡಿಗೆ ಅದು ತೀರುಗಂಟ.... ಒಂದು ಅಷ್ಟು ದಿನ ಗೆಯಿಸ್ಕೊಳ್ರಪ್ಪೋ ಕರ್ಕೊಂಡ್ಹೋಗಿ.

ಬೋರೇಗೌಡ : ಈ ಕಳ್ಳನನ್ಮಗ ತಿರ್ಗ ನನ್ಮನೆ ಹೊಸಿಲು ಹತ್ತುದು ಬ್ಯಾಡ. ಈಗ ಬರಿ ಐವತ್ತಕ್ಕೆ ಇಕ್ಕವ್ನೆ ನಾಮವ. ಇನ್ನೊಂದು ಸತಿ ಬಂದ್ರೆ ಹೊತ್ಕೊಂಡೆ ಹೊಂಟೋಯ್ತನಪ್ಪ, ಸಾವಿರಾರು ರೂಪಾಯಿನ ಗಂಟ.

ದೊಡ್ಡೈದ : ಈಗ ಇನ್ನೇನು ಮಾಡ್ಮಾ ಅಂತ?

ಬೋರೇಗೌಡ : ಮಾಡ್ತೀನಿ ನೋಡ್ತಾಯಿರು.... ಈ ನನ್ಮಗನ್ಗೆ ಹಿಂದ್ಕೆ ಯಾರು ಮಾಡಿರ್ಬಾರ್ದು, ಮುಂದ್ಕೆ ಯಾರು ಮಾಡ್ಬಾರ್ದು. ಹಂಗೆ ಬುದ್ಧಿ ಕಲಿಸ್ತೀನಿ.

ದೊಡ್ಡೈದ : ಏನು ಹಿಡ್ಕೊಂಡು ಹೊಡ್ದೀಯ, ಸುಮ್ನೆ ಕೆಚ್ಚಿಸ್ಕೊತನೆ ಅಷ್ಟೆ.

ಬೋರೇಗೌಡ : (ಒಂದು ಕ್ಷಣ ಕಾಲ ಕೂಲಿಯವನನ್ನೇ ತಿನ್ನುವಂತೆ ನೋಡುತ್ತಿದ್ದು....)

ಲೇ... ಬಿಚ್ಚಲ.... ನಿನ್ನಂಗಿಯ.

ಬಡರ : ಬ್ಯಾಡಿ ಬುದ್ರಪ್ಪೋ.

ಬೋರೇಗೌಡ : ಲೇ ಎಷ್ಟು ಸತಿನ್ಲಾ ನಿಂಗೆ ಹೇಳೂದು. ಎಲ್ಲಾ ಕಲ್ಸೋಗುವಂಗೆ ಎದೆಗಾರ್ಸಿ ಒದ್ದು ಬುಡ್ತೀನಿ ನೋಡು. ನಿಂತ್ಕೊಳ್ಳೆ ಸುಮ್ನೆ....

(ಕೂಲಿಯವನ ಕಡೆ ತಿರುಗಿ)

ಬಿಚ್ಚು ಕೊಡ್ಲೆ ಅಂಗಿಯ.

ದೊಡ್ಡೈದ : (ಜೋರಾಗಿ ನಗುತ್ತಾ)

ಆ ಅಂಗೀಲಿ ಏನಿದ್ದದು.... ಎಲ್ಲಾ ಹರ್ದೋಗಿ ತತಾನ್ ತೂತು ಆಗ್ಹೋಗದೆ.

ಬೋರೇಗೌಡ : ತೂತೋ.... ಗೀತೋ. ಈ ಸೂಳೆ ಮಗ ಕಂಡೋರ ಗಂಟ ನುಂಕೊಂಡತ್ಕೆ, ಅಂಗಿ ಬಟ್ಟೆ ಬಿಚ್ಚಿ ಬರೀ ಮೈಲಿ ಕಳುಸದ್ರಂತೆ ಅಂತ ಒಂದು ಹೆಸ್ರಾಗ್ಲಿ. ಎಲ್ಲೋದ್ರು ಈ ಬಡ್ಡಿ ಹೈದಂಗೆ ಕೂಲಿ ಹುಟ್ದೇ ಹೋಗ್ಲಿ.... ಬಿಚ್ಲಾ ಅಂಗಿಯ.

ಬಡರ : ಸುಮ್ನಿರಪ್ಪೋ, ಪಾಪ ಅದ ಬುಟ್ರೆ ಇಕ್ಕೋಕೆ ಹೊದ್ಕೋಕೆ ಇನ್ನೇನು ಇಲ್ಲ.... ಬ್ಯಾಡಿ ಕಣ್ರಪ್ಪೋ.

ಬೋರೇಗೌಡ : (ಬಡರನನ್ನು ಹಿಡಿದು ಕುಕ್ಕುವಂತೆ ಒಮ್ಮೆ ನೋಡಿ. ಮತ್ತೆ ಕೂಲಿಯವನತ್ತ ತಿರುಗಿ)

ಲೇ ಬಿಚ್ಲೆ.... ಅತ್ತಾಗೆ ಏನು ನೋಡ್ತಿದ್ದೀಯ.... ಈಸ್ಕೊಂಡಿರು ದುಡ್ಡ ಕೊಡ್ಬೇಕು ಅನ್ನು ಗ್ಯಾನ ಇಲ್ದೇ ಇರೊ ಸೂಳೆಮಕ್ಳಗೆ ಬಟ್ಟೆ ಬ್ಯಾರೆ ಕೇಡು....

(ಎನ್ನುತ್ತಾ ಆ ಕೂಲಿಯವನ ಕಡೆಗೆ ನುಗ್ಗುತ್ತಾನೆ. ಕೂಲಿಯವನ ಕತ್ತಿಗೆ ಕೈ ಹಾಕಿ ಎಳೆದಾಡುತ್ತಾ ಅಂಗಿಯನ್ನು ಕೀಳುತ್ತಾನೆ. ಆ ರಭಸಕ್ಕೆ ಅಂಗಿ ಮತ್ತಷ್ಟು ಹರಿದು ಹೋಗಿ ಬೋರೇಗೌಡನ ಕೈಗೆ ಬರುತ್ತದೆ. ಅಷ್ಟರಲ್ಲಿ ಕುಡುಕ ಕರಿಯಪ್ಪನು ರಂಗದ ಎಡಬದಿಯಿಂದ ಬರುತ್ತಾನೆ. ರಸ್ತೆಯಲ್ಲಿನ ಈ ಗಲಾಟೆಯನ್ನು ಕುತೂಹಲದಿಂದ ನೋಡುತ್ತಾ....)

ಕರಿಯಪ್ಪ : ಓ.... ನಮ್ಮ ದೊಡ್ಡ ಬೋರೇಗೌಡ. ಇದೇನಣ್ಣಾ ಇಲ್ಲಿ ನಿಂತ್ಬುಟ್ಟೆ. ಇದೇನು ಕೈಯಲ್ಲಿ?

(ಅಂಗಿಯನ್ನು ಒಮ್ಮೆ ಮತ್ತು ಅಂಗಿಯಿಲ್ಲದೆ ನಿಂತಿದ್ದ ಆ ಕೂಲಿಯವನನ್ನು ಒಮ್ಮೆ ನೋಡುತ್ತಾ ಇದ್ದಕ್ಕಿದ್ದಂತೆ ಕಿಲಕಿಲನೆ ನಗತೊಡಗುತ್ತಾನೆ.)

ನಂಗೊತ್ತಾಗ್ಹೋಯ್ತು ಬುಡಪ್ಪ. ಎಲ್ಲಾ ಗೊತ್ತಾಗ್ಹೋಯ್ತು. ನೀನೇನು ಹೇಳೂದೆ ಬ್ಯಾಡ. ಎಲ್ಲಾನು ನಾನೇ ಹೇಳ್ಬುಡ್ತೀನಿ. ಈ ಬಡ್ಡೀಹೈದ ನಿನ್ನತ್ರ ಕೂಲಿಗೆ ಬತ್ತಿದ್ದ. ಆಮೇಲೆ ಹೆಚ್ಚಾಗಿ ದುಡ್ಡು ಈಸ್ಕೊಂಡು ಇಕ್ದ ನಾಮವ ನಿಂಗೆ. ಅದ್ಕೆ ನೀನು ಇವ್ನ ಅಂಗಿಬಟ್ಟೆ ಕಿತ್ಕೊಂಡಿದ್ದೀಯೆ.... ಕರೆಟ್ ಅಲ್ವೆ ನಾ ಹೇಳ್ತಾ ಇರೋದು....

(ಹೌದು ಎನ್ನುವಂತೆ ಗೌಡ ತಲೆಯಲ್ಲಾಡಿಸುತ್ತಾನೆ)
ನಂಗೆ ತಿಳೀದೆ ಇರೂದು ಈ ಪ್ರಪಂಚದಾಗೆ ಯಾವುದು ತಾನೆ ಇದ್ದದು?

(ಕೂಲಿಯವನ ಕಡೆ ಕೈ ತೋರಿಸುತ್ತಾ)
ಈ ನನ್ಮಕ್ಳೆ ಇಂಥಾವ್ರು. ಇಕ್ಕೊಂಡು ಉಣ್ಣು ತಾವು ಕದ್ದುಕೊಂಡು ತಿನ್ನೊ ಸೂಳೇಮಕ್ಳು. ಹಾಲು ಕೊಡೊ ಕೆಚ್ಚಲ್ನೆ ಕೂದು, ರಕ್ತ ಕುಡಿಯೋ ಬಡ್ಡೀ ಹೈಕ್ಳು. ಈ ನನ್ಮಕ್ಳಗೆ ಹಿಂಗೇ ಮಾಡ್ಬೇಕು. ಅಣ್ಣೋ.... ಅಂಗಿ ಒಂದ್ನೆ ಕಿತ್ಕೊಂಡಿದ್ದೀಯಲ್ಲ, ನೀ ತಪ್ಪು ಮಾಡ್ದೆ ಬುಡಣ್ಣ. ನಾನು ಒಪ್ಪುದಿಲ್ಲ ನಿನ್ನ ಕೆಲ್ಸಾನ.... ನಾ ಒಪ್ಪುದಿಲ್ಲ ಅಂದೆ.

ಬೋರೇಗೌಡ : ಏನೋ ಸಕತ್ತಾಗಿ ಹಾಕ್ಬುಟ್ಟಿದ್ದೀಯೇ?

ಕರಿಯಪ್ಪ : ಬುಡಣ್ಣೋ, ನಾನು ನಿನ್ನ ಒಪ್ಪೂದಿಲ್ಲ ಅಂದೆ.... ಯಾಕೆ ಅಂತ ಕೇಳಣ್ಣ?

ಬೋರೇಗೌಡ : ಯಾಕ್ಲ?

ಕರಿಯಪ್ಪ : ಇವನ ಚಡ್ಡಿ ಯಾಕೆ ಬುಟ್‌ಬುಟ್ಟಿದ್ದೀಯೆ? ಅದ್ನು ಕಿತ್ಕೊ. ಈ ನನ್ನಕ್ಳು ಹುಟ್ಟಾಗ ಹೆಂಗೆ ಬರಿ ಮೈಲಿ ಬಂದ್ರೊ.... ಹಂಗೇನೆ ಇದ್ದು.... ಹಂಗೇನೆ ಸತ್ತೋಗ್ಬೇಕು.

(ಆ ಕೂಲಿಯವನ ಬಳಿಗೆ ಹೋಗಿ, ಅವನ ಮೈಯನ್ನು ಸವರುತ್ತಾ)
ಲೇ, ಹುಟ್ಟಾಗ್ಲೆ ಹಾಕ್ಕೊಂಡು ಬಂದಿರೂ ಈ ಕರಿ ಚರ್ಮದ ಅಂಗಿ ಮ್ಯಾಲೆ.... ಇನ್ಯಾವ ಅಂಗೀನು ನೀನು ಹಾಕೊಬ್ಯಾಡ ಕಲೆ. ನೀ ಹಾಕೊಂಡ್ರೆ ನೋಡು.... ನಮ್ಮ ಗೌಡನಂಥವ್ರು ಕಿತ್ಕೊತರೆ. ಇದೇ ಪರ್ಮನೆಂಟ್ ಅಂಗಿ ಕಲೆ ನಿಂಗೆ.

ದೊಡ್ಡೈದ : (ತನ್ನ ಮೂಗನ್ನು ಮುಚ್ಚಿಕೊಳ್ಳುತ್ತಾ)

ಥೂ.... ಥೂ.... ರಾಮ.... ರಾಮ ಯಾಪಾಟಿ ಕುಡ್ದವನಪ್ಪ.

ಕರಿಯಪ್ಪ : ಲೋ ದೊಡ್ಡೈದ.... ವಾಸ್ನೆ ಹೊಡ್ದದ. ನಿಂಗೆಲ್ಲೊ ಗ್ಯಾನ ಮಟ್ಟಕ್ಕಿಲ್ಲ. ಅದ್ಕೆ ವಾಸ್ನೆ ಹೊಡ್ದಂಗಾಯ್ತದೆ.

ಬೋರೇಗೌಡ : ನಿಂದೆ ಆರಾಮು ಕಲ ಕರಿಯ. ಯಾವ ಮಳೆ ಊದ್ರೆಷ್ಟು? ಯಾವ ಬೆಳೆ ಆದ್ರೆಷ್ಟು? ದಿನ ಬೆಳಗಾದ್ರೆ ಕಂಠಮಟ್ಟ ಕುಡುದ್ಬುಟ್ಟು, ಆನಂದವಾಗಿ ತಿರುಗಾಡ್ತಿಯೆ.

ಕರಿಯಪ್ಪ : ಅಣ್ಣೊ, ಈ ಲೋಕದಲ್ಲಿ ಮನುಸನಾಗಿ ಹುಟ್ಟೂದೆ ಒಂದು ದಪ. ಇಲ್ಲೇ ಕುಡಿದೆ ಹೋದ್ರೆ, ಇನ್ನು ಅಲ್ಲಿ ಕುಡಿಯುಕಾದದಣ್ಣ?

(ಆ ಕೂಲಿಯವನನ್ನು ಕುರಿತು)

ಲೋ ಬಡ್ಡೀಹೈದ್ನೆ ನಿಂಗೆಷ್ಟಲಾ ಕೆಚ್ಚು? ನಮ್ಮ ಗೌಡನ ಹಣವಾ ಹೊಡ್ಕೊಂಡಿದ್ದೀಯಲ್ಲ. ಲೇ, ಅವರ್ನ ಯಾರು ಅಂತ ತಿಳ್ಕೊಂಡಿದ್ದೀಯೆ? ಈ ಸುತ್ತ ಹತ್ತು ಹಳ್ಳಿಗೆ ದೊಡ್ಡ ಗೌಡ. ಹದಿನೈದು ಎಕರೆ ಗದ್ದೆ ಅದೆ; ದೊಡ್ಡದೊಂದು ಮನೆ ಅಯ್ತೆ; ದನ ಅವೆ; ಕರ ಅವೆ; ಅವೆಲ್ಲಾನು ಅವ್ರಪ್ಪ ಮ್ಯಾಲಿಂದ್ಲೇ ಹೊತ್ಕೊಂಡು ಬಂದಿದ್ದ ಈ ಪ್ರಪಂಚಕ್ಕೆ.... ಲೇ ನಿಮ್ಮಪ್ಪ ಏನ್ನಾ ಕೊಟ್ಟಿದ್ದನು ನಿಂಗೆ?

(ಕೂಲಿಯವನ ದೇಹದ ಕಡೆ ಬೆರಳು ಮಾಡಿ ತೋರಿಸುತ್ತಾ)

ಇವೆರಡು ಕಾಲು, ಇವೆರಡು ಕೈ. ಇವೇ ನಿನ್ನ ಆಸ್ತಿ.... ನಿನ್ನ ಸಂಪತ್ತು. ಇವು ಗೇದ್ರೆ ಉಂಟು.... ಇಲ್ದೇದ್ರೆ ಇಲ್ಲ. ಲೇ.... ಗೆಯ್ಯು ಬಡ್ಡಿ ಹೈಕ್ಳಗೆ ಯಾಕ್ಲ ಅಂಗಿ?.... ಯಾಕ್ಲ ಮನೆ?.... ಯಾಕ್ಲ ಹಣ?.... ಬರೀ ಮೈಯಲ್ಲೆ ಸುಮ್ನೆ ಗೆಯ್ರೋ ಬಡ್ಡಿ ಹೈಕ್ಳ....

(ಗೌಡರ ಕಡೆ ತಿರುಗಿ)

ನೀನು ಇಕ್ಕೊ ಗೌಡ ಅಂಗಿಯ. ತಿರ್ಗ ಕೊಡ್ಗಿಡುಬ್ಯಾಡ.

ದೊಡ್ಡೈದ : ನಿನ್ನ ಮಾತ ಕಟ್ಕೊಂಡ್ರೇನಿಲ್ಲಾ?.... ಅದ ನಮ್ಮ ಗೌಡ.... ತನಗೆ ಅಂಗಿ ಬಟ್ಟೆಯಿಲ್ಲ, ಅದಕ್ಕೆ ಇಕ್ಕೊಬೇಕು ಅಂತ ಕಿತ್ಕೊಂಡಿದ್ದನೆ?

ಕರಿಯಪ್ಪ : ಇನ್ಯಾಕ್ಲ ಕಿತ್ಕೊಂಡಿದ್ದನು ಅಂಗಿಯ ನಿಮ್ಮ ಗೌಡ? ಪ್ರಪಂಚದಲ್ಲಿ ಯಾವೋನು ಮಾಡ್ದೆ ಇರೂ ಅನ್ಯಾಯನ ಈ ಪರ್ದೇಶಿ ಬಡ್ಡತ್ತದು ಮಾಡವ್ನೆ.... ಅದ್ಕೆ ಸರಿಯಾದ ಶಿಕ್ಷೆ ಕೊಟ್ಬುಡ್ಮ ಅಂತ ಕಿತೊಂಡಿದ್ದನೆ. ಲೋ.... ದೊಡ್ಡೈದ, ನಿಮ್ಮ ಗೌಡ ಏನು ಬಲು ಸಾಚಾನೆ?.... ನಾ ಕಾಣ್ನೆ ಅವನ ತೂತ.

ಬೋರೇಗೌಡ : ಏನ್ಲೆ ನೀನು ಕಂಡಿರೋದು?

ಕರಿಯಪ್ಪ : ಏನಾ?.... ಏನು ಅಂತ ಕೇಳಿಯಾ? ಎಲ್ಲಾನು ಒದುರ್ಬುಡನೇ?

ಬೋರೇಗೌಡ : ಅದೇನ್ ಒದುರ್ಲಾ ಕುಡ್ಕು ಸೂಳೇಮಗ್ನೆ.

ಕರಿಯಪ್ಪ : ನೀನು ಊರ್ಗೆ ದೊಡ್ಡ ಮನೆ ಕಟ್ಟಿಸಿದ್ದೀಯಲ್ಲ. ಆ ಜಾಗ ಯಾರ್ದು?.... ಆ ಗಂಡ ಸತ್ತ ಮುಂಡೆ ಮಾದಿದಲ್ಲವೇ? ಸಾವಿರಾರು ರೂಪಾಯಿ ಬೆಲೆ ಬಾಳು ಸೈಟ ಮೂರ್ಕಾಸು ಕೊಡ್ದೆ ಹೊಡ್ಕೊಂಡಲ್ಲ.... ಅದು ನ್ಯಾಯವೇ?.... ಎಷ್ಟು ಮನೆ ದೀಪ ತುಂಬಿಸಿ, ಎಷ್ಟು ಮನೆ ಎಕ್ಕ ಹುಟ್ಟಿಸಿ, ನಿನ್ಮನೆ ದೊಡ್ಡದು ಮಾಡ್ಕೊಂಡಿದ್ದೀಯೆ ಅನ್ನೋದ ಊರೆಲ್ಲ ಕಂಡದೆ ಕಣ ಮುಚ್ಲೆ.

ಬೋರೇಗೌಡ : ಲೇ ಕುಡ್ಕು ನನ್ಮಗನೆ, ನನ್ನ ಸುದ್ದೀಗೆ ಬರ್ಬೇಡ. ಹಲ್ಲು ಉದುರ್ಸಾಕು ಬುಡ್ತೀನಿ.

ಕರಿಯಪ್ಪ : ನಿಂತ್ಕೊಳಯ್ಯ ಸುಮ್ನೆ. ನನ್ನ ಮುಂದೆ ತೋರಿಸ್ಬೇಡ ನಿನ್ನ ಪೌರುಷವ....

(ಕೂಲಿಯವರ ಕಡೆ ಕೈ ತೋರಿಸುತ್ತಾ)

ಇವರ್ನ ಹೆದರಿಸ್ದಂಗೆ ನನ್ನ ಹೆದರ್ಸೂಕೆ ಬರ್ಬೇಡ. ಅಮಾಸೆಲಿ ಹುಟ್ಟಿದ ಬಡ್ಡಿಹೈದ ನಾನು.... ನಿನ್ತಾವು ಜೀತ ಮಾಡ್ಕೊಂಡು ಇದ್ನಲ್ಲ ಆ ಹೊಲೇರ ನಿಂಗ, ಅವನ ಹೆಸರಲ್ಲಿ ಎರಡು ಇಲಾಯ್ತಿ ಹಸ ತಕೊಂಡು, ನಿನ್ನ ಅಟ್ಟೀಲಿ ಕಟ್ಕೊಂಡಿದ್ದೀಯೆ. ಅದೇನೋ ಸರ್ಕಾರದೋರು ಕೊಡು ಸಬ್ಸಿಡಿ ಗಿಬ್ಸಿಡಿ ಅಂತಾರಲ್ಲಪ್ಪ ಅದ ಅವನ ಹೆಸರಲ್ಲಿ ಮಾಡ್ಸಿ, ನೀನು ಸಾವಿರಾರು ರೂಪಾಯಿ ಮಿಗಿಸ್ಕೊಂಡೆ. ಅಲ್ಲಿಗೆ ಬಡವರಿಗೆ ಸೇರಬೇಕಾದ ಸರ್ಕಾರದ ದುಡ್ನ.... ನೀನು ಅನ್ಯಾಯದಲ್ಲಿ ತಿಂದಂಗಲ್ಲವೋ?.... ಅವರ ಹೊಟ್ಟೆ ಮ್ಯಾಲೆ ಹೊಡ್ದಂಗಲ್ಲವೋ?.... ಇಂಥಾ ಬೇಕಾದಷ್ಟು ಅನ್ಯಾಯಗಳನ್ನು ನೀನು ಮಾಡ್ತ ಇದ್ದೀಯಲ್ಲ.... ನಿಂಗ್ಯಾರು ಹೊಡೀಬೇಕು? ಯಾತ್ರಲ್ಲಿ ಹೊಡೀಬೇಕು?....

(ಅಲ್ಲಿ ನಿಂತಿದ್ದ ಕೂಲಿಗಳ ಕಡೆ ತಿರುಗಿ)

ಥೂ, ಅನ್ನಾಡಿ ನನ್ಮಕ್ಳ. ಅವರು ಇಬ್ಬರು, ನೀವು ಐದಾರು ಜನ ಇದ್ದೀರಿ. ಅವನು ಇವನ ಅಂಗಿಬಟ್ಟೆ ಕಿತ್ಕೋತಿದ್ದಾಗ ನೀವೇನು ತರೀತಿದ್ರಾ....? ಅವನ ತಡಿಯುವಷ್ಟು ಶಕ್ತಿ ನಿಮ್ಮಲ್ಲಿ ಇರಲಿಲ್ಲವೇ? ಅವನು ಹೊಡಿಯೋಕೆ ಬಂದಾಗ.... "ಅದೆಂಗೆ ಮುಟ್ಟಿಯೇ ಬಾ ಮುಟ್ಟು" ಅಂತ ಹೇಳೂಕೆ ನಿಮ್ಗೆ ನಾಲ್ಗೆ ಇರ್ಲಿಲ್ವೆ?.... ನೀವು ಇನ್ನೆಷ್ಟು ದಿನ ಹಿಂಗೇನೆ ಉಗಿಯೋರು ಕೈಲಿ ಉಗಿಸ್ಕೊಂಡು.... ಒದಿಯೋರು ಕೈಲಿ ಒದಿಸ್ಕೊಂಡು.... ತುಳಿಯೋರು ಕೈಲಿ ತುಳಿಸ್ಕೊಂಡು.... ತೆಪ್ಪಗೆ ಇರ್ತೀರೋ.... ಅಲ್ಲೀತನಕ ಯಾರು ಬಂದ್ರು ನಿಮ್ಮ ಉದ್ಧಾರ

ಮಾಡೋಕಾಗೊಲ್ಲ. ಲೇ, ನಿಮ್ಮ ಯಾರಾದ್ರು ಹೊಡ್ದಾಗ.... ಹಿಂತಿರಿಕೊಂಡು ಹೊಡಿರ್ಲ್ಲಾ; ಒದ್ದಾಗ.... ಕೆಡೀಕೊಂಡು ಒದಿರ್ಲಾ. ಆಗ ಯಾರು ನಿಮ್ಮ ಸಿಂತೆಗೆ ಬರ್‍ದೆ ಹೊಯ್ತರೆ..

(ಎಂದು ಅರಚುತ್ತಾ ಅಲ್ಲಿಂದ ಹೋಗುತ್ತಿರುತ್ತಾನೆ. ಬೋರೇಗೌಡ ಕೋಪೋದ್ರೇಕದಿಂದ ಕರಿಯಪ್ಪನಿಗೆ ಹೊಡೆಯಲೆಂದು ನುಗ್ಗುತ್ತಾನೆ. ದೊಡ್ಡೈದ ಅವನನ್ನು ತಡೆಯುತ್ತಾನೆ.)

ದೊಡ್ಡೈದ : ಸುಮ್ಕಿರಣ್ಣೊ.... ಆ ಕುಡ್ಕನ ಮಾತ್ಗೆ ಯಾಕೆ ಕೋಪ ಮಾಡ್ಕೊಂಡಿಯೆ, ಬಾಣ್ಣ ಇತ್ತಗೆ.

ಕರಿಯಪ್ಪ : (ಹೋಗುತ್ತಿದ್ದಂತೆಯೇ)
ಲೇ ಗಂಡ್ಸಾಗಿದ್ರೆ ಬಾ ಮಗ್ನೆ. ನನ್ನ ಮೈ ಮುಟ್ಟು ಬಾ. ಹುಟ್ಟಲಿಲ್ಲ ಅನ್ನಿಸ್ಬುಡ್ತೀನಿ ನಿನ್ನ....
(ಎನ್ನುತ್ತಾ ಅಲ್ಲಿಂದ ನಿರ್ಗಮಿಸುತ್ತಾನೆ.)

ದೊಡ್ಡೈದ : ಒಳ್ಳೆ ರಾದ್ಧಾಂತ ಆಗ್ಹೋಯ್ತು. ಬಾಣ್ಣ ಹೋಗ್ಮ.

ಬೋರೇಗೌಡ : ಲುಚ್ಚ ಸೂಳೇಮಕ್ಳ ಸಾವಾಸ....

(ಕೂಲಿಯವನ ಕಡೆ ತಿರುಗಿ)
ಥೂ ಸೂಳೇಮಗ್ನೆ ಇನ್ನೊಂದು ದಿನ ಇತ್ತಾಗೆ ತಲೆ ಹಾಕ್ಕೊಂಡು ಮಲಿಕೊಂಡಿಯೇ ಜೋಕೆ?

ದೊಡ್ಡೈದ : ಆ ಅಂಗಿಯ ಅತ್ತಾಗೆ ಬಿಸಾಕ್ಬುಟ್ಟು ಬಾಣ್ಣ.

ಬೋರೇಗೌಡ : ಅಂಗಿಬಟ್ಟೆಯ ತಿರ್‍ಗ ಆ ಬಡ್ಡತ್ತದ್ಕೆ ನಾ ಕೊಟ್ಟನೆ.

ದೊಡ್ಡೈದ : ಇನ್ನೇನ್ ಮಾಡ್ಕೊಂಡಿಯೆ ಅದ?

ಬೋರೇಗೌಡ : ನೋಡ್ತಾ ಇರು, ಇದ ಏನ್ ಮಾಡ್ತೀನಿ ಅಂತ?
(ಎನ್ನುತ್ತಾ ತನ್ನೆಲ್ಲಾ ಆಕ್ರೋಶವನ್ನು ಅದರ ಮೇಲೆ ತೀರಿಸಿಕೊಳ್ಳುವಂತೆ ಅಂಗಿಯನ್ನು ಗೀಳಲು ತೊಡಗುತ್ತಾನೆ. ನಾಲ್ಕಾರು ಬಾರಿ ಅದನ್ನು ಹರಿದು ಚಿಂದಿ

ಮಾಡುತ್ತಿದ್ದಾಗ, ಅಂಗಿಯನ್ನು ಕಳೆದುಕೊಂಡಿದ್ದ ಕೂಲಿಯವನು ತೀವ್ರತರವಾದ ಪ್ರತಿಭಟನೆಯ ಧ್ವನಿಯಿಂದ ಅರಚುತ್ತಾನೆ.)

ಕೂಲಿ : ಅಪ್ಪೋ.... ಅಂಗಿ ಬಟ್ಟೆ ಹರಿಬ್ಯಾಡ....

(ಉಗ್ರವಾಗಿ ಉರಿಯುತ್ತಿರುವ ಕಣ್ಣಗಳಿಂದ ಬೋರೇಗೌಡನನ್ನೇ ತಿನ್ನುವಂತೆ ನೋಡುತ್ತಾ, ಅವನನ್ನು ಅಪ್ಪಳಿಸುವಂತೆ ಕೈಗಳೆರಡನ್ನು ಮೇಲಕ್ಕೆತ್ತಿ ಗೌಡನ ಕಡೆಗೆ ಅಡಿಯಿಡುತ್ತಾನೆ. ಅಲ್ಲಿ ನಿಂತಿದ್ದ ಕೂಲಿಯವರೆಲ್ಲರ ಕೈಗಳು ಯಾವುದೋ ಒಂದು ಬಗೆಯ ಆವೇಶಕ್ಕೆ ಒಳಗಾದಂತೆ ಮೇಲಕ್ಕೇಳುತ್ತವೆ. ಅವರೆಲ್ಲರೂ ಗೌಡನ ಕಡೆಗೆ ಹೆಜ್ಜೆಯಿಡುತ್ತಿದ್ದಂತೆಯೇ, ಬೋರೇಗೌಡನ ಮುಖದಲ್ಲಿ ಭೀತಿಭಾವ ಕವಿಯುತ್ತದೆ. ಅಂಗಿಯು ಅವನ ಕೈಗಳಿಂದ ಜಾರಿ ನೆಲದ ಮೇಲೆ ಬೀಳುತ್ತದೆ. ಕೂಲಿಗಳು ಮುನ್ನುಗ್ಗುತ್ತಿರುವುದನ್ನು ಎದುರಿಸಲಾರದ ಬೋರೇಗೌಡ ಮೆಲ್ಲಮೆಲ್ಲನೆ ರಂಗದಿಂದ ದೊಡ್ಡೈದನ ಸಂಗಡ ಹಿಮ್ಮುಖವಾಗಿ ಹೆಜ್ಜೆಗಳನ್ನಿಡುತ್ತಾ ಮರೆಯಾಗುತ್ತಾನೆ. ಬೋರೇಗೌಡ ಹೋದ ಕೂಡಲೇ ಕೂಲಿಯವನ ಮುಖದಲ್ಲಿ ಕಂಡು ಬರುತ್ತಿದ್ದ ರೌದ್ರ ಭಾವ ಇದ್ದಕ್ಕಿದ್ದಂತೆಯೇ ಮರೆಯಾಗಿ ಅಲ್ಲಿ ತೀವ್ರವಾದ ನೋವು ಕಾಣಿಸಿಕೊಳ್ಳುತ್ತದೆ. ಹರಿದು ಚಿಂದಿ ಚಿಂದಿಯಾಗಿ ನೆಲದ ಮೇಲೆ ಬಿದ್ದಿರುವ ತನ್ನ ಅಂಗಿಬಟ್ಟೆಯನ್ನು ನೋಡುತ್ತಿದ್ದಂತೆಯೇ ಅಪಮಾನದ ಸಂಕಟ ಅವನ ಹೃದಯವನ್ನು ಹಿಂಡುತ್ತದೆ. ಚಿಂದಿಯಾಗಿದ್ದ ಅಂಗಿಯನ್ನು ಮೇಲಕ್ಕೆತ್ತಿ ನೋಡಿ, ಅದನ್ನು ತನ್ನೆರಡು ಕೈಗಳಿಂದ ಎದೆಗಾನಿಸಿ ಹಿಡಿದುಕೊಳ್ಳಲು ಪ್ರಯತ್ನಿಸುತ್ತಾನೆ. ದುಃಖ ಉಮ್ಮಳಿಸಿ ಬಂದು, ಹಾಗೆಯೇ ಕುಸಿದು ಕುಳಿತುಕೊಳ್ಳುತ್ತಿದ್ದಂತೆಯೇ ಹಿನ್ನೆಲೆಯಿಂದ

ಡಿ.ವಿ. ಗುಂಡಪ್ಪನವರು ರಚಿಸಿರುವ ``ಮಂಕುತಿಮ್ಮನ ಕಗ್ಗ'' ದಿಂದ ಆಯ್ದ ಕಾವ್ಯದ ಸಾಲುಗಳು ಹಾಡಾಗಿ ಕೇಳಿ ಬರುತ್ತವೆ.

ಹೊಟ್ಟೆರಾಯನ ನಿತ್ಯದಟ್ಟಹಾಸವೊ ಬಾಳು
ಧೃಷ್ಟ ಧನಿಯೊಳಿಗಕೆ ಸೊಟ್ಟು ಮೈ ಬಾಗು
ಹಿಟ್ಟಿಗಗಲಿದ ಬಾಯಿ, ಬಟ್ಟೆಗೊಡ್ಡಿದ ಕೈಯಿ
ಇಷ್ಟೆ ನಮ್ಮೆಲ್ಲ ಕಥೆ ಮಂಕುತಿಮ್ಮ.

(ಹಾಡು ಮುಗಿಯುತ್ತಿದ್ದಂತೆಯೇ ರಂಗದ ಮೇಲೆ ಕತ್ತಲು ಕವಿಯುತ್ತದೆ.)

❍

ಬರಹಗಾರ

ಹೆಸರು	:	ಸಿ.ಪಿ. ನಾಗರಾಜ
ತಾಯಿ	:	ಲಕ್ಷ್ಮಿದೇವಮ್ಮ, ಮದ್ದೂರು, ಮಂಡ್ಯ ಜಿಲ್ಲೆ.
ತಂದೆ	:	ಪುಟ್ಟೇಗೌಡ, ಚೆಕ್ಕೆರೆ, ಚೆನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.
ಓದು	:	ಎಂ.ಎ., ಪಿಎಚ್.ಡಿ.
ಕೆಲಸ	:	ಕನ್ನಡ ಉಪನ್ಯಾಸಕ 1971-72 ಅರ್ಜುನಪುರಿ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ. 1972-2003 ಭಾರತಿ ಕಾಲೇಜು, ಕಾಳಮುದ್ದನ ದೊಡ್ಡಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ. 2006-ಸ್ನಾತಕೋತ್ತರ ಕೇಂದ್ರ, ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು.
ನಾಟಕ	:	ಭಾಗೀರಥಿ ಅಂಬೆ ಹಾವು ಅಂಗಿ ಬಟ್ಟೆ ಒಂದು ರೂಪಾಯಿ ಕಳ್ಳರಿದ್ದಾರೆ... ಎಚ್ಚರಿಕೆ ಹೆಣದ ಹಣ
ಗದ್ಯ	:	ಹಳ್ಳಿಗಾಡಿನ ರೂವಾರಿ ಡಾ.ಬಂದೀಗೌಡ ಆಣೆ ಪ್ರಮಾಣಗಳು ಬಯ್ಗುಳ ಸರ್ವಜ್ಞ ವಚನಗಳ ಓದು ಅಲ್ಲಮ ವಚನಗಳ ಓದು ಶಿವಶರಣಶರಣೆಯರ ವಚನಗಳ ಓದು ಶಿವಶರಣರ ವಚನಗಳ ಓದು ಬಸವಣ್ಣ ವಚನಗಳ ಓದು ಮುದ್ದೆಗಂಟು
ವಿಳಾಸ	:	ಸಿ.ಪಿ. ನಾಗರಾಜ, 75, 'ಎ' ಬ್ಲಾಕ್, 5 ನೆಯ ಕ್ರಾಸ್, ಕ್ರಿಶ್ಣ ಗಾರ್ಡನ್, ಆರ್.ವಿ.ಕಾಲೇಜು ಪೋಸ್ಟ್, ಬೆಂಗಳೂರು-560059. ಮೊ.9986347521. ngy7777@gmail.com